ಇದು ಅದರ ಕಾರ್ಯವ್ಯಾಪ್ತಿಯಲ್ಲಿ ಬರುವುದರಿಂದ, ಅಲ್ಲಿ ಕ್ರಮ ಕೈಗೊಳ್ಳಬೇಕು. ಅದರಲ್ಲೂ ಆಸ್ಪತ್ರೆ ಬೇಕು ಎಂದು ಯಾವ ಶಿಫಾರಸ್ಸು ಕೂಡ ಸರ್ಕಾರಕ್ಕೆ ಬಂದಿಲ್ಲವಾದ್ದರಿಂದ, ನಗರಸಭೆಯೇ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ನಮ್ಮ ಇಲಾಖಾ ವತಿಯಿಂದ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಇ.ಮಾರುತಿರಾವ್ ಪವಾರ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೇಳುತ್ತಿರುವ ಪ್ರಕಾರ ಅವರು ಪ್ರಾಥಮಿಕ ಆರೋಗ್ಯ ಕೇಂದ್ರದ ಬಗ್ಗೆ ಮಾತನಾಡುತ್ತಿದ್ದಾರೆ. ಅದು ಕಾರ್ಪೋರೇಷನ್‌ಗೆ ಸಂಬಂಧಪಡುತ್ತದೆ. ಸನ್ಮಾನ್ಯ ಮಿತ್ರರು ಕೇಳುತ್ತಿರುವಂಥಾದ್ದು ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯನ್ನು ಮಾಡಿಕೊಡಬೇಕು ಎಂದು. ಪ್ರೈಮರಿ ಸೆಂಟರ್ ಮಾತ್ರ ಕಾರ್ಪೋರೇಷನ್‌ಗೆ ಬರುತ್ತದೆ. ಸಾರ್ವಜನಿಕ ಆಸ್ಪತ್ರೆ ಸರ್ಕಾರಕ್ಕೆ ಬರುತ್ತದೆ.

ಅಧ್ಯಕ್ಷರು:- ತಾವು ಕೇಳುತ್ತಿರುವುದು ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯನ್ನು ಎಷ್ಟು ಹಾಸಿಗೆಗಳು ಬೇಕೆಂದು ಕೇಳುತ್ತಿದ್ದೀರಿ?

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:- ನೂರು ಹಾಸಿಗೆ ಅಥವಾ 50 ಹಾಸಿಗೆಗಳುಳ್ಳ ಆಸ್ಪತ್ರೆಯನ್ನು ಕೇಳುತ್ತಿದ್ದೇವೆ. ಪ್ರೈಮರಿ ಹೆಲ್ತ್ ಸೆಂಟರ್‌ಗೂ, ಸಾರ್ವಜನಿಕ ಆಸ್ಪತ್ರೆಗೂ ವ್ಯತ್ಯಾಸ ಇದೆ. ಅದು ಮಾನ್ಯ ಸಚಿವರಿಗೆ ಅರ್ಥವಾಗಿಲ್ಲವೆಂದು ಕಾಣುತ್ತದೆ.

ಡಾ.ಹೆಚ್.ಸಿ.ಮಹದೇವಪ್ಪ:- ಮಾನ್ಯ ಅಧ್ಯಕ್ಷರೇ, ನಗರಸಭೆಯವರನ್ನು ಹಾಗೂ ಮಾನ್ಯ ಶಾಸಕರನ್ನು ಕರೆದು ಚರ್ಚೆ ಮಾಡಿ ಇದನ್ನು ಮಾಡುವುದಕ್ಕೆ ಸಾಧ್ಯವಿದೆಯೇ ಎಂದು ನೋಡುತ್ತೇನೆ. ಸದಸ್ಯರು ಅದೇ ಜಿಲ್ಲೆಯವರೇ ಇದ್ದಾರೆ, ಹಾಗೂ ಅದೇ ಜಿಲ್ಲೆಯ ಇತರ ಸದಸ್ಯರನ್ನು ಅಲ್ಲಿ ಕರೆದು ಕುಳಿತು ಚರ್ಚೆ ಮಾಡೋಣ.

ಅಧ್ಯಕ್ಷರು:- ನೀವು, ನಗರಪಾಲಿಕೆಯವರು, ಮಾನ್ಯ ಮಂತ್ರಿಗಳು ಎಲ್ಲಾ ಸೇರಿ ಒಂದು ನಿರ್ಣಯ ಮಾಡಿ.

ಅಧ್ಯಕ್ಷರು:- ನಿಮ್ಮ ಪ್ರಶ್ನೆ ಸಂಖ್ಯೆ:57 (370) ಲೋಕೋಪಯೋಗಿ ಮಂತ್ರಿಗಳು ಉತ್ತರ ನೀಡಬೇಕಾಗಿರುವ ದಿವಸ ಕೊಡುತ್ತಾರೆ. ಪ್ರಶ್ನೆಯನ್ನು ಮೊದಲು ಬೇರೆ ಇಲಾಖೆಗೆ ಅಡ್ರೆಸ್ ಮಾಡಿದ್ದರು. ಈಗ ಟ್ರಾನ್ಸ್‌ಫರ್ ಆಗಿದೆ. ಅದಕ್ಕೆ ಉತ್ತರ ಕೊಡಬೇಕಾದ ಜವಾಬ್ದಾರಿ ಲೋಕೋಪಯೋಗಿ ಮಂತ್ರಿಗಳಿಗೆ ಇರುತ್ತದೆ. ಆ ಮಂತ್ರಿಗಳು ತಮ್ಮ ಇಲಾಖೆಯ ಪ್ರಶ್ನೆಗಳಿಗೆ ಉತ್ತರಿಸಬೇಕಾದ ದಿವಸ ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ:- ಅಂದು ಆ ಪ್ರಶ್ನೆ ಬರುತ್ತದೆ ಅಂದರೆ ತುಂಬಾ ಒಳ್ಳೆಯದು. ಏಕೆಂದರೆ ಅಲ್ಲಿ ನಡೆದಿರುವ ಕೆಲಸ ನೋಡಿದರೆ ಉತ್ತರವೇ ಬರುವುದಿಲ್ಲ ಎಂದು ಕಾಣುತ್ತದೆ.

ವಿಷಯ:- ರಾಜ್ಯದಲ್ಲಿ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಕೈಗೊಂಡಿರುವ ನೀರಿನ ಯೋಜನೆಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 58 (400)

ಶ್ರೀ ಬಿ.ಶಿವರಾಮು (ಗಂಡಸಿ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ. 1) ರಾಜ್ಯದಲ್ಲಿ ಪ್ರಮುಖ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆ ಮತ್ತು ನಿರ್ಮಲೀಕರಣಕ್ಕೆ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ತೆಗೆದುಕೊಂಡಿರುವ ಜಿಲ್ಲೆಗಳು ಯಾವುವು?

2) ಕಾಮಗಾರಿಗಳು ಯಾವ ಹಂತದಲ್ಲಿವೆ?

ಆ. 1) ನಿರ್ಮಲೀಕರಣಕ್ಕೆ ಗ್ರಾಮದವರು ಗ್ರಾಮದ ಸಂಘದ ವತಿಯಿಂದ ಯೋಜನಾ ವೆಚ್ಚದ ಶೆ. 30 ಭರಿಸಬೇಕೆಂಬ ನಿಬಂಧವಿದೆಯೇ?

2.) ಇದ್ದರೆ, ವೆಚ್ಚ ಭರಿಸದ ಗ್ರಾಮಗಳನ್ನು ಯೋಜನೆಯ ಅನುಷ್ಠಾನದಿಂದ (ನೀರು ಮತ್ತು ನೈರ್ಮಲ್ಯತೆ) ಕೈ ಬಿಡಲಾಗುತ್ತದೆಯೇ?

3) ಕೈ ಬಿಟ್ಟರೆ ಬದಲೀ ಗ್ರಾಮಗಳನ್ನು ಆಯ್ಕೆ ಮಾಡಲಾಗುತ್ತದೆಯೇ?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-

ಅ. 1) ಈ ಕೆಳಕಂಡ ಜಿಲ್ಲೆಗಳಲ್ಲಿ ವಿಶ್ವಬ್ಯಾಂಕ್ ಯೋಜನೆ ಅಡಿಯಲ್ಲಿ ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ.

1) ಬೆಂಗಳೂರು (ಗ್ರಾ)	7) ದಕ್ಷಿಣ ಕನ್ನಡ
2) ಶಿವಮೊಗ್ಗ	8) ಹಾಸನ
3) ಬೆಳಗಾವಿ	9) ಗುಲ್ಬರ್ಗಾ
4) ತುಮಕೂರು	10) ಬೀದರ್
5) ಮಂಡ್ಯ	11) ರಾಯಚೂರು
6) ಮೈಸೂರು	12) ಬಳ್ಳಾರಿ.

2) ಪ್ರಾಯೋಗಿಕ ಹಂತ:

ಯೋಜನೆಯಲ್ಲಿ ಕೆಲಸಗಳನ್ನು ಪ್ರಮಾಣಬದ್ಧ ಮಾಡಲು ಪ್ರಾರಂಭದಲ್ಲಿ ಪ್ರಾಯೋಗಿಕವಾಗಿ 11 ಗ್ರಾಮಗಳಲ್ಲಿ ಕೆಲಸ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ.

ಹಂತ - 1

ಮೊದಲ ಹಂತದ 10 ಜಿಲ್ಲೆಗಳ 257 ಗ್ರಾಮಗಳಲ್ಲಿ ಕೆಲಸ ತೆಗೆದುಕೊಳ್ಳಲಾಗಿದೆ.

ಕಾಮಗಾರಿಗಳ ಒಟ್ಟು ಮೊತ್ತ ರೂ. 7406.75 ಲಕ್ಷ. 181 ಗ್ರಾಮಗಳಲ್ಲಿ ನೀರಿನ ಕಾಮಗಾರಿ ಕೆಲಸ ಪ್ರಗತಿಯಲ್ಲಿರುತ್ತವೆ. ದಿನಾಂಕ: 30.6.96ರವರೆಗೆ ರೂ. 3072.19 ಲಕ್ಷ ರೂಪಾಯಿ ಖರ್ಚು ಮಾಡಲಾಗಿದೆ.

ಹಂತ- 2

2ನೇ ಹಂತದಲ್ಲಿ 932 ಗ್ರಾಮಗಳು ಸೇರಿದೆ. ಇವುಗಳಿಗಾಗಿ 1442 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. 524 ಗ್ರಾಮಗಳಲ್ಲಿ ನೀರಿನ ಜಲಮೂಲವನ್ನು ಸ್ಥಾಪಿಸಲಾಗಿದೆ. ಸುಮಾರು 120 ಗ್ರಾಮಗಳಲ್ಲಿ ಕಾಮಗಾರಿ ಕೆಲಸ ಪ್ರಾರಂಭಿಸಲು ಟೆಂಡರುಗಳನ್ನು ಶೀಘ್ರದಲ್ಲಿ ಆಹ್ವಾನಿಸಲಾಗುವುದು.

ಅ. 1) ಹೌದು.

2) ಹೌದು.

3) ಈವರೆಗೆ ಯಾವ ಗ್ರಾಮಗಳನ್ನು ಪಟ್ಟಿಯಿಂದ ತೆಗೆದಿಲ್ಲ. ಆದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ.ಶಿವರಾಂ:- ಮಾನ್ಯ ಅಧ್ಯಕ್ಷರೇ, ಈಗ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಗ್ರಾಮಾಂತರ ನೀರು ಸರಬರಾಜು ಮತ್ತು ನಿರ್ಮಲೀಕರಣ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ 12 ಜಿಲ್ಲೆಗಳಲ್ಲಿ ಆಯ್ಕೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆ 12 ಜಿಲ್ಲೆಗಳಲ್ಲಿ 1,190 ಹಳ್ಳಿಗಳನ್ನು ಆಯ್ಕೆ ಮಾಡಿ ಪ್ರಾಯೋಗಿಕವಾಗಿ 11 ಗ್ರಾಮಗಳಲ್ಲಿ ಕೆಲಸ ಪ್ರಾರಂಭ ಮಾಡುತ್ತಿದ್ದೇವೆ ಹಾಗೂ ಎರಡನೆಯದಾಗಿ ಒಂದನೇ ಹಂತದಲ್ಲಿ 10 ಜಿಲ್ಲೆಗಳಲ್ಲಿ 257 ಗ್ರಾಮಗಳಲ್ಲಿ ಕೆಲಸವನ್ನು ತೆಗೆದುಕೊಳ್ಳಲಾಗಿದೆ ಎಂದು ಹೇಳಿ, 181 ಗ್ರಾಮಗಳಲ್ಲಿ ನೀರಿನ ಕಾಮಗಾರಿ ಕೆಲಸ ಪ್ರಗತಿಯಲ್ಲಿದೆ ಎಂದು ಹೇಳಿದ್ದಾರೆ. 257ರಲ್ಲಿ 181 ಗ್ರಾಮಗಳಲ್ಲಿ ಮಾತ್ರ ಪ್ರಗತಿಯಲ್ಲಿದ್ದು, ಉಳಿದಂತಹ ಗ್ರಾಮಗಳಲ್ಲಿ ಏಕೆ ಕಾಮಗಾರಿ ಕೆಲಸ ಪ್ರಾರಂಭವಾಗಿಲ್ಲ ಎನ್ನುವುದು ಮೊದಲ ಪ್ರಶ್ನೆ. ಎರಡನೇ ಹಂತದಲ್ಲಿ 982 ಗ್ರಾಮಗಳನ್ನು ಆಯ್ಕೆ ಮಾಡಿ, ನೀರಿನ ಜಲಮೂಲವನ್ನು ಹುಡುಕತಕ್ಕಂಥ ವ್ಯವಸ್ಥೆಯಲ್ಲಿ ಇದೆ. ಅದರಲ್ಲಿ ಕೆಲವು 120 ಗ್ರಾಮಗಳಲ್ಲಿ ಅಷ್ಟೇ ಕೆಲಸ ಪ್ರಾರಂಭಿಸಲು ಟೆಂಡರ್‌ಗಳನ್ನು ಶೀಘ್ರದಲ್ಲಿ ಆಹ್ವಾನಿಸಲಾಗುವುದು ಎಂದು ಹೇಳಿದ್ದಾರೆ. ಡಿಲೇಗೆ ಕಾರಣವೇನು? ಈ ಪ್ರಶ್ನೆಯನ್ನು ಕೇಳುತ್ತಿರತಕ್ಕಂಥಾದ್ದು ನಿರ್ಮಲೀಕರಣಕ್ಕೆ ಗ್ರಾಮದವರು ಗ್ರಾಮದ ಸಂಘದ ವತಿಯಿಂದ ಯೋಜನಾ ವೆಚ್ಚದ 30 ಭಾಗವನ್ನು ಭರಿಸಬೇಕೆಂಬ ನಿರ್ಭಂದವಿದೆಯೇ ಎಂದು ಕೇಳಿದ್ದಕ್ಕೆ ''ಹೌದು'' ಎಂದು ಹೇಳಿದ್ದಾರೆ. ಭರಿಸದಿದ್ದರೆ ಕೆಲಸವನ್ನು ಕೈಬಿಡಲಾಗುತ್ತದೆಯೇ ಎಂದು ಕೇಳಿರುವುದಕ್ಕೆ ''ಹೌದು'' ಎಂದು ಹೇಳಿದ್ದಾರೆ. ಕೈಬಿಟ್ಟರೆ ಬದಲೀ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳುತ್ತೀರಾ ಎನ್ನುವ ಪ್ರಶ್ನೆಗೆ ಈ ಪ್ರಶ್ನೆ ಉದ್ಭವಿರುವುದಿಲ್ಲವೆಂದು ಹೇಳಿದ್ದಾರೆ. ನಾನು ಇದನ್ನು ಮೂಲಭೂತವಾಗಿ ಏಕೆ ಕೇಳುತ್ತಿದ್ದೇನೆಂದರೆ ಇದರ ಬಗ್ಗೆ ಮಂತ್ರಿಗಳ ಜೊತೆ ಕೂಡ

ಒಮ್ಮೆ ಚರ್ಚೆ ಮಾಡಿದ್ದೇನೆ. ಶೇಕಡ 30ರಷ್ಟು ಹಣವನ್ನು ಗ್ರಾಮದ ಸಂಘದವರು ಕೂಡಿಸಿ ತುಂಬಿಸಿ ಕೊಡತಕ್ಕಂಥಾದ್ದು ಬಹಳ ಕಷ್ಟವಿದೆ ಎನ್ನುವ ವಿಚಾರವನ್ನು ಅವರ ಗಮನಕ್ಕೆ ನಾನು ಈಗಾಗಲೇ ತಂದಿದ್ದೇನೆ. ಆ ಹಿನ್ನೆಲೆಯಲ್ಲಿ ಕೆಲವು ಗ್ರಾಮಗಳ ಕೆಲಸ ಪ್ರಗತಿಯಲ್ಲಿ ಇಲ್ಲ ಎಂದು ನಾನಾದರೂ ಭಾವಿಸಿದ್ದೇನೆ. ನಮ್ಮ ಜಿಲ್ಲೆಯಲ್ಲೂ ಕೂಡ ನನ್ನ ಕ್ಷೇತ್ರದಲ್ಲಿ ಆಯ್ಕೆಯಾಗಿರತಕ್ಕಂಥ 21 ಗ್ರಾಮಗಳಲ್ಲಿ ಕೆಲವು ಹಳ್ಳಿಗಳಲ್ಲಿ ಈ ಯೋಜನೆಯನ್ನು ಆ ಅವಶ್ಯಕತೆ ಹಾಗೂ ಜನಸಂಖ್ಯೆ ಆಧಾರದ ಮೇಲೆ ತೆಗೆದುಕೊಂಡಿದ್ದರು. ಆದರೆ ಹಣವನ್ನು ಭರಿಸತಕ್ಕಂಥಾದ್ದು ಕಷ್ಟವಾಗಿರುವುದರಿಂದ ಆ ಕೆಲಸವನ್ನು ಕೈಬಿಡುತ್ತೇವೆ ಎನ್ನುವ ಮಾತನ್ನು ಸ್ಪಷ್ಟವಾಗಿ ಅವರು ಹೇಳುತ್ತಿದ್ದಾರೆ. ಆ ತರಹ ಬಿಟ್ಟರೆ ಬೇರೆ ಗ್ರಾಮವನ್ನು ಕೊಡತಕ್ಕಂಥ ವ್ಯವಸ್ಥೆ ಮಾಡುತ್ತೀರಾ ಅಥವಾ ತುಂಬಿಸುವುದಕ್ಕೆ ಆಗದೇ ಇದ್ದರೆ ಸರ್ಕಾರ ಏನು ಚಿಂತನೆ ಮಾಡುತ್ತದೆ?

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ಎರಡು ವಿಷಯಗಳಲ್ಲಿ ಈಗಾಗಲೇ ತಮಗೆ ಅರಿಕೆ ಮಾಡಿದಂತೆ 257 ಗ್ರಾಮಗಳಲ್ಲಿ ಕೆಲಸ ತೆಗೆದುಕೊಂಡಿದ್ದೇವೆ ಎಂದರೆ ಜಲ ಮೂಲಗಳನ್ನು ಶೋಧಿಸತಕ್ಕಂಥಾದ್ದು ಮತ್ತು ಪ್ರಾಥಮಿಕವಾಗಿರತಕ್ಕಂಥ ಸರ್ವೇ ಮಾಡತಕ್ಕಂಥಾದ್ದು ಸಮೀಕ್ಷೆ ಮಾಡತಕ್ಕಂಥಾದ್ದು, ನೀಲಿ ನಕ್ಷೆ ಮಾಡತಕ್ಕಂಥಾದ್ದು ಹಾಗೂ 181 ಗ್ರಾಮಗಳಲ್ಲಿ ಸಂಪೂರ್ಣವಾಗಿ ಕೆಲಸ ಚೆನ್ನಾಗಿ ನಡೆಯುತ್ತಿದೆ. ಇನ್ನು ಎರಡನೇ ಹಂತದಲ್ಲಿ 532 ಗ್ರಾಮಗಳಲ್ಲಿ 1,442 ಕಡೆ ಕೊಳವೇ ಬಾವಿಗಳನ್ನು ಕೊರೆಯಲಾಗಿದೆ. ಇನ್ನು 120 ಗ್ರಾಮಗಳಿಗೆ ನಾವು ಟೆಂಡರ್‌ಗಳನ್ನು ಕರೆದಿದ್ದೇವೆ. ಈಗಾಗಲೇ ಮಾನ್ಯ ಸದಸ್ಯರಿಗೆ ತಿಳಿಸಿದಂತೆ ವಿಶ್ವಬ್ಯಾಂಕ್ ಯೋಜನೆ ಕೆಳಗಡೆ ಒಂದು ಎಮ್‌ಪವರ್ ಕಮಿಟಿ ಎಂದು ಮಾಡಿದ್ದರು. ಒಂದು ಸಚಿವ ಸಂಪುಟ ಸಭೆ ತೆಗೆದುಕೊಳ್ಳಬೇಕಾದಂತಹ ತೀರ್ಮಾನದ ಎಲ್ಲಾ ಅಧಿಕಾರವನ್ನು ಕೂಡ ಎಂಪವರ್ ಮಾಡಿದ್ದೇವೆ. ಕಮಿಟಿಗೆ ಕೊಟ್ಟರತಕ್ಕಂಥಾದ್ದು, ಮುಖ್ಯವಾಗಿ ಅಭಿವೃದ್ಧಿ ಇಲಾಖೆಯ ಆಯುಕ್ತರ ನೇತೃತ್ವದಲ್ಲಿ ಬೇರೆ ಬೇರೆ ಇಲಾಖೆಯ ಕಾರ್ಯದರ್ಶಿಗಳು ಸೇರಿ ಸಚಿವಸಂಪುಟದ ಸಭೆಗಿಂತಲೂ ಶೀಘ್ರವಾಗಿ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ ಎನ್ನುವ ಕಾರಣದಿಂದ ಹಿಂದಿನ ಸರ್ಕಾರದವರು ತೆಗೆದುಕೊಂಡಿರತಕ್ಕಂಥ ನಿರ್ಣಯವಾಗಿರುವುದರಿಂದ ಅದು ಸ್ವಲ್ಪಮಟ್ಟಿಗೆ ವಿಳಂಬಕ್ಕೆ ಕಾರಣವಾಯಿತು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಆರು ತಿಂಗಳೊಳಗಾಗಿ ಟೆಂಡರ್ ವಿಚಾರದಲ್ಲಿ ಸಂಪೂರ್ಣವಾಗಿ ಪರಿಗಣಿಸಿ ಮಾಹಿತಿಯನ್ನು ಕೊಡಿಸಿ ಕೆಲಸವನ್ನು ನಾವು ಈಗಾಗಲೇ ಪ್ರಾರಂಭ ಮಾಡಿದ್ದೇವೆ.

12.10 ಪಿ.ಎಂ

ಅವರು ಹೇಳಿದಂಥ ಮುಖ್ಯವಾದ ಪ್ರಶ್ನೆ ಏನಿದೆ, ಈ ಪರಿಸರ ಮಾಲಿನ್ಯಕ್ಕೆ ಸಂಬಂಧಪಟ್ಟಂತೆ, ನೈರ್ಮಲ್ಯಕ್ಕೆ ಸಂಬಂಧಪಟ್ಟಂತೆ ಶೇಕಡ 30ರಷ್ಟು ಭಾಗ ಹಣ ಕಟ್ಟಬೇಕಾದದ್ದು ಏನಿದೆ ಅದರಲ್ಲಿ ಕೆಲವು ಹಳ್ಳಿಗಳಿಗೆ ಬೇರೆಬೇರೆ ಕಾರಣಗಳಿಂದಾಗಿ ಹಣ ಕಟ್ಟಲಿಕ್ಕೆ ಸಾಧ್ಯವಾಗಲಿಲ್ಲ. ಕನಿಷ್ಪಪಕ್ಷ ಅವರು ಅರ್ಧಭಾಗವನ್ನಾದರೂ ಹಣ ಕಟ್ಟಿದರೆ ಆ

ಕೆಲಸ ಪ್ರಾರಂಭ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಕೂಡ ನಾನು ಅವರಿಗೆ ಹೇಳಿದ್ದೇನೆ. ನಾನು ಈ ವಿಚಾರದಲ್ಲಿ ಮಾನ್ಯ ಸದಸ್ಯರೊಡನೆ ಸಹಮತದಲ್ಲಿ ಇದ್ದೇನೆ. ಇನ್ನೂ ಪ್ರಯತ್ನವನ್ನು ನಾವು ಮಾಡುತ್ತೇವೆ. ಅದಕ್ಕಾಗಿ ಬೇರೆ ಸ್ವಯಂಸೇವಾ ಸಂಘಸಂಸ್ಥೆಗಳನ್ನು ಇದರ ಜೊತೆಗೆ ತೊಡಗಿಸತಕ್ಕಂಥ ಕೆಲಸ ಮಾಡಿದ್ದೇವೆ. ಈ ಎಲ್ಲಾ ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಂಡಿರತಕ್ಕಂಥ ಗ್ರಾಮಗಳನ್ನು ವಂತಿಕೆ ಕಟ್ಟಿಲ್ಲ ಎನ್ನುವ ಒಂದೇ ಕಾರಣಕ್ಕಾಗಿ ಕೈಬಿಡತಕ್ಕಂಥಾದ್ದು ಸರಿಯಲ್ಲ. ಕೈಬಿಡಬಾರದೆನ್ನುವುದೇ ನನ್ನ ಅಭಿಪ್ರಾಯ. ಇಲಾಖೆಯವರ ಜೊತೆಗೆ ಮಾತನಾಡುತ್ತಿದ್ದೇವೆ. ನಾವು ಬೇರೆ ಮೂಲಗಳಿಂದ ಈ ಹಣವನ್ನು ವಂತಿಗೆಯನ್ನು ಕಟ್ಟಬಹುದೇ ಎಂದು ನಾವು ವಿಶ್ವಬ್ಯಾಂಕ್ ಯೋಜನೇ ಜತೆಯೊಡನೆ ಮಾತನಾಡಿದಾಗ, ವಿಶ್ವಬ್ಯಾಂಕ್ ಯೋಜನೆಯವರು ಇದರಲ್ಲಿ ಪಾಲ್ಗೊಳ್ಳುವಿಕೆಯ ಸಂಸ್ಕೃತಿ ಇರಬೇಕು, ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿನ ಅವರೇ ಇದರಲ್ಲಿ ಪಾಲ್ಗೊಳ್ಳಬೇಕು ಎನ್ನುವಂಥ ಷರತ್ತನ್ನು ಅವರು ಹೆಚ್ಚು ಒತ್ತಡಕೊಟ್ಟು ಒತ್ತಾಯಿಸುತ್ತಿರುವುದರಿಂದ, ನಾನು ಇನ್ನೂ ಪ್ರಯತ್ನವನ್ನು ಮಾಡುತ್ತಿದ್ದೇನೆ. ಸಧ್ಯದ ಮಟ್ಟಿಗೆ ಆ ಗ್ರಾಮಗಳನ್ನು ಕೈಬಿಡುವುದಿಲ್ಲ. ಒಂದು ವೇಳೆ ಕೈಬಿಡುವಂತ ಪ್ರಸಂಗ ಏನಾದರೂ ಬಂದರೆ, ಎಲ್ಲಾ ಶಾಸಕರುಗಳ ಜೊತೆಗೆ ಚರ್ಚೆಮಾಡಿ, ಅದರಲ್ಲಿ ಆಯಾಯ ಶಾಸಕರುಗಳು ಇರತಕ್ಕಂಥ ವ್ಯಾಪ್ತಿಯಲ್ಲಿ ಮತ್ತೊಂದು ಗ್ರಾಮವನ್ನೂ ಕೂಡ ತೆಗೆದುಕೊಂಡು ಬರುವಂತ ಪ್ರಯತ್ನವನ್ನು ಮಾಡಬಹುದು. ಇನ್ನು ಅವರ ಹಾಸನ ಜಿಲ್ಲೆಗೆ ಸಂಬಂಧಿಸಿದಂತೆ, ಆಕ್ಷೇತ್ರಕ್ಕೆ ಸಂಬಂಧಸಿದ ವಿವರ ಈಗ ನನ್ನ ಹತ್ತಿರ ಇಲ್ಲ. ಸುಮಾರು ನೂರು ಗ್ರಾಮಗಳನ್ನು ತೆಗೆದುಕೊಂಡಿದ್ದೇವೆ. ಅದರಲ್ಲಿ ಈಗಾಗಲೇ 67 ಗ್ರಾಮಗಳಲ್ಲಿ ಜಲಮೂಲಗಳನ್ನು ಕಂಡುಹಿಡಿದು ಕೆಲಸಗಳನ್ನು ಪ್ರಾರಂಭಮಾಡಿದ್ದೇವೆ. ಇನ್ನೂ 45 ಗ್ರಾಮಗಳಲ್ಲಿ ನಕಾಶೆ ತಯಾರು ಮಾಡುವಂಥ ಕೆಲಸ ಪ್ರಗತಿಯಲ್ಲಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇದು ಬಹಳ ಮುಖ್ಯವಾದ ವಿಷಯ ಇದೆ. ಏತಕ್ಕೆಂದರೆ, ಅನೇಕ ತಾಲ್ಲೂಕುಗಳಲ್ಲಿ ಈ ಸ್ಕೀಮ್ ಅಪ್ರೂವ್ ಆಗಿದೆ. ಒಂದೊಂದು ತಾಲ್ಲೂಕಿಗೆ 4-5-6 ಗ್ರಾಮಗಳಿಗೆ ಈ ರೀತಿಯಾಗಿ ಕೊಟ್ಟಿದ್ದಾರೆ. ಇದು ಇಂಟಿಗ್ರೇಟಡ್ ವಿಲೇಜ್ ಡೆವಲಪ್‌ಮೆಂಟ್ ಟೈಪ್ ಇದೆ. ಅದಕ್ಕೆ ಕೆಲವು ಕಡೆ ಈ ಸ್ಥಳೀಯ ಸಂಸ್ಥೆಗಳಿಂದಾಗಲೀ ಅಥವಾ ಆ ಊರವರೇ ಹಣವನ್ನು ಸಂಗ್ರಹಣೆ ಮಾಡಿ ಈ ಅಭಿವೃದ್ಧಿ ಮಾಡುವುದಕ್ಕೆ ಆಗುವುದಿಲ್ಲ. ತಮಗೆಲ್ಲ ಗೊತ್ತಿದೆ, ಹಿಂದುಳಿದ ಭಾಗಗಳಲ್ಲಂತೂ ಇದು ಸಾಧ್ಯವೇ ಇಲ್ಲ. ಸುಮ್ಮನೆ ಅವರು ಏನು ಮಾಡುತ್ತಾರೆ ಎಂದರೆ, ಯಾರೋ ಒಬ್ಬರು ಕಾಂಟ್ರಾಕ್ಟರ್‌ನ್ನು ಹಿಡಿದು ಒಂದು ಹತ್ತಿಪ್ಪತ್ತು ಪರ್ಸೆಂಟ್ ಹಾಕಿ ನೀವೇ ಮಾಡಿ ಎಂದು ಹೇಳಿ ಅವರನ್ನು ಮುಂದು ಮಾಡಿ ಮಾಡಿಸುತ್ತಾರೆ. ಅದರಿಂದ ಏನಾಗುತ್ತದೆ ಎಂದರೆ ಗುಣಮಟ್ಟ ಕೂಡ ಕಡಿಮೆಯಾಗುತ್ತದೆ ಮತ್ತು ನನಗೆ ಬೇಕು, ನಿನಗೆ ಬೇಕು ಎಂದು ಆ ಕಾಂಟ್ರಾಕ್ಟರ್‌ಗಳ ಕಾಂಪಿಟೇಷನ್‌ನಲ್ಲಿ ಕೆಲಸ ಆಗುವುದಿಲ್ಲ. ಅದಕ್ಕೆ ನನ್ನ ಸಲಹೆ ಏನೆಂದರೆ, ಒಂದು ರೂರಲ್ ಡೆವಲಪ್‌ಮೆಂಟ್ ಸೊಸೈಟಿ ಎಂದು ಮಾಡಿ, ಹಿಂದೆ ಏನಿತ್ತು, ಆ ರೀತಿಯಾಗಿ ಮಾಡಿ; ಅದಕ್ಕೆ ಡೆಪ್ಯುಟಿ ಕಮಿಷನರ್ ಅವರಿಗೆ

ವಹಿಸಿ ಅವರನ್ನೇ ಅಧ್ಯಕ್ಷರನ್ನಾಗಿ ಮಾಡಿ, ರೂರಲ್ ಡೆವಲಪ್‌ಮೆಂಟ್ ಸೊಸೈಟಿ ಎಂದು ಮಾಡಿ, ಏಕೆಂದರೆ ಅದೂ ಕೂಡ ನಾನ್ ಗವರ್ನಮೆಂಟಲ್ ಆರ್ಗನೈಸೇಷನ್ - ಎನ್.ಜಿ.ಓ. ಆಗಿರಲಿ. ಆ ಎನ್.ಜಿ.ಓ. ಮುಖಾಂತರ ಮಾಡಿಸಿದರೆ ಕೆಲಸ ಕೂಡ ಪಕ್ಕಾ ಆಗುತ್ತದೆ. ಮತ್ತು ಯಾವ್ಯಾವ ಊರುಗಳಿಗೆ ಈ ಸ್ಕೀಮ್ ಬಂದಿದೆ, ಅಲ್ಲಿ ಅದು ಲ್ಯಾಪ್ಸ್ ಆಗುವುದಿಲ್ಲ. ಇಲ್ಲದಿದ್ದರೆ ಅನೇಕ ಕಡೆ ಲ್ಯಾಪ್ಸ್ ಆಗುತ್ತವೆ ಮತ್ತು ಇದನ್ನು ನಾವು ಮಾಡುತ್ತೇವೆ ಎಂದು ಹೇಳಿದವರು, ನನಗನಿಸಿದ ಮಟ್ಟಿಗೆ ನೂರಕ್ಕೆ ಹೆಚ್ಚೆಂದರೆ ಒಂದು ಐದು-ಹತ್ತು ಜನ ಚೆನ್ನಾಗಿ ಮಾಡಬಹುದೇ ಹೊರತಾಗಿ ಬಾಕಿಯವರಿಗೆ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಇದನ್ನು ತಾವು ಪುನರ್ ಪರಿಶೀಲಿಸಿ ರೂರಲ್ ಡೆವಲಪ್‌ಮೆಂಟ್ ಸೊಸೈಟಿ ಎಂದು ಕಾನ್ಸ್‌ಟ್ಯೂಟ್ ಮಾಡಿ, ಡೆಪ್ಯೂಟಿ ಕಮಿಷನರ್‌ನ್ನು ಅದರ ಅಧ್ಯಕ್ಷರನ್ನಾಗಿ ಮಾಡಿ ಇಂತಹ ಹಳ್ಳಿಗಳ ಅಭಿವೃದ್ಧಿ ಕೆಲಸಗಳನ್ನು ತಾವು ತೆಗೆದುಕೊಳ್ಳತಕ್ಕದ್ದು ಮಾಡಬೇಕೆಂದು ಹೇಳಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್:- ಸನ್ಮಾನ್ಯ ಅಧ್ಯಕ್ಷರೇ, ಬಹಳ ಉತ್ತಮವಾದ ಸಲಹೆಯನ್ನೇನೋ ಕೊಟ್ಟಿದ್ದಾರೆ. ಇದು ವಿಶ್ವಬ್ಯಾಂಕ್ ಯೋಜನೆಯಿಂದ, ಬೇರೆ ಕಡೆಯಿಂದ ಬಂದಿರತಕ್ಕಂಥ ಹಣ. ನಾವು ಡಿಸೆಂಬರ್ 1993ರಲ್ಲಿ ಒಂದು ಒಪ್ಪಂದವನ್ನು ಮಾಡಿಕೊಂಡಿದ್ದೇವೆ. ಬರೀ ಒಪ್ಪಂದವನ್ನು ಮಾಡಿಕೊಂಡು ಸುಮಾರು ಎರಡೂವರೆ ವರ್ಷಗಳ ಕಾಲ ಟೆಂಡರ್‌ನ್ನು ಯಾವರೀತಿ ವಿಲೇವಾರಿ ಮಾಡಬೇಕೆನ್ನುವ ಜಿಜ್ಞಾಸೆಯಲ್ಲೇ ಕಾಲಕಳೆದುಹೋಯಿತು. ಹಾಗಾಗಿ ಮತ್ತೆ ನಾವು ಈಗ ರೂರಲ್ ಡೆವಲಪ್‌ಮೆಂಟ್ ಸೊಸೈಟಿ ಎಂದು ಮಾಡಿ ಅದರ ಮೂಲಕ ಹಣ ಒದಗಿಸುತ್ತೇವೆ ಎಂದು ಹೇಳಿದರೂ ಕೂಡ ಅದು ಕಷ್ಟವಾಗಬಹುದು. ಆದರೆ ನಾವಿಲ್ಲಿ ಏನು ಪರಿಹಾರವನ್ನು ಕಂಡುಹಿಡಿದಿದ್ದೇವೆ ಎಂದರೆ, ಕುಡಿಯುವ ನೀರಿನಲ್ಲಿ ಬಂದಿರತಕ್ಕಂತ ಅಂದಾಜು ಮೊತ್ತದಲ್ಲಿ ಅವರು ಪಾಲ್ಗೊಳ್ಳಬೇಕಾದಂಥ ಅಗತ್ಯ ಇಲ್ಲ. ಆದರೆ ಪರಿಸರ ನೈರ್ಮಲ್ಯಕ್ಕೆ ಸಂಬಂಧಿಸಿದ ವಿಚಾರದಲ್ಲಿ ಶೇಕಡಾ 30ರಷ್ಟು ಭಾಗವನ್ನು ಆ ಗ್ರಾಮಾಂತರ ಪ್ರದೇಶಗಳ ಫಲಾನುಭವಿಗಳು ಕಟ್ಟಬೇಕೆಂದು ಇದೆ. ಅದಕ್ಕೆ ಹಣ ಕಟ್ಟಬೇಕೆನ್ನುವಾಗ, ನಾವು ಬೇರೆ ಮೂಲಗಳಿಂದ ಕಟ್ಟುತ್ತೇವೆ. ಈಗ ಜಿಆರ್‌ವೈ 80ರ ಕೆಳಗೆ ಆ ಹಣ ಕಟ್ಟಲಿಕ್ಕೆ ಆ ಗ್ರಾಮ ಮುಂದೆ ಬರಬಹುದು ಎಂದರೆ, ವಿಶ್ವಬ್ಯಾಂಕ್‌ನವರು ಅದಕ್ಕೆ ಆಕ್ಷೇಪಣೆಗಳನ್ನು ಮಾಡುತ್ತಿದ್ದಾರೆ. ಅಲ್ಲಿ ಫಲಾನುಭವಿಗಳಾಗಿರತಕ್ಕಂಥ ಊರಿನವರೇ ಕಟ್ಟಬೇಕೇ ವಿನಹ ಅನ್ಯಮೂಲಗಳಿಂದ ಕಟ್ಟಬಾರದು ಎನ್ನತಕ್ಕಂಥ ಮಾತನ್ನು ಅವರು ಹೇಳುತ್ತಾರೆ. ಅದನ್ನು ತಪ್ಪಿಸುವುದಕ್ಕೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿರುವುದು ಸಾಧುವಾದಂಥ ವಿಷಯ. ಅದರಲ್ಲಿ ಒಂದು ರೂರಲ್ ಡೆವಲಪ್‌ಮೆಂಟ್ ಸೊಸೈಟಿ ಎಂದು ಮಾಡಿ, ಅದರ ವಂತಿಕೆಯಿಂದ ಬಂದಿರದಕ್ಕಂಥ ಹಣವನ್ನು ಇದಕ್ಕೆ ನಾವು ಇಟ್ಟಿದ್ದೇವೆ ಎಂದು ಹೇಳಿ ನಾವು ಇದನ್ನು ರೂಪಾಂತರಗೊಳಿಸಬಹುದು. ಇಷ್ಟರಮಟ್ಟಿಗೆ ಈ ಸಲಹೆ ಯೋಗ್ಯವಾಗಿರತಕ್ಕಂಥದ್ದು ಇದೆ. ಅದನ್ನು ನಾವು ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ.ಆರ್.ಯಾವಗಲ್:- ಮಾನ್ಯ ಅಧ್ಯಕ್ಷರೇ, ಈ ವಿಶ್ವಬ್ಯಾಂಕ್ ಯೋಜನೆ

ಅಲ್ಲದೆ, ಇದರ ಜೊತೆಗೆ ನೆದರ್‌ಲ್ಯಾಂಡ್ ಮತ್ತು ಡೆನ್ಮಾರ್ಕ್ ದೇಶಗಳಿಂದ ಬಂದಂಥ ಎಕ್ಸಟರನಲ್ ಏಡೆಡ್ ಈ ಕಾರ್ಯಕ್ರಮಗಳು ಏನಿವೆ, ಬಹುತೇಕ ಈ ಕಾರ್ಯಕ್ರಮಗಳು ಬಹಳ ನಿಧಾನಗತಿಯಲ್ಲಿ ನಡೆಯುತ್ತಿವೆ. ಮಾನ್ಯ ಮಂತ್ರಿಗಳು ಹೇಳಿದರು ಒಪ್ಪಂದ ಮಾಡಿಕೊಂಡಿದ್ದೇವೆ ಎಂದು. ಸುಮಾರು ಮೂರು-ನಾಲ್ಕು ವರ್ಷಗಳಿಂದ ಇದು ನಡೆಯುತ್ತಿದ್ದು, ಇನ್ನು ಯಾವುದೇ ರೀತಿಯಿಂದ ಇದನ್ನು ಬಹಳ ವೇಗವಾಗಿ ಮಾಡುವಂಥ ಹಂತಕ್ಕೆ ತಲುಪಿಲ್ಲ ಎಂದು ಬಹಳ ವಿಷಾದದಿಂದ ತಮ್ಮ ಎದುರಿಗೆ ಹೇಳುತ್ತಾ ಈ ಯೋಜನೆಗಳು ಏನಿವೆ, ಇವುಗಳು ಬಂದಂಥ ಹಳ್ಳಿಗಳಿಗೆ, ಅಲ್ಲಿರುವಂಥ ಸ್ಕೀಮ್‌ಗಳು ಅರ್ಧಂಬರ್ಧವಾಗಿಯಾಗದರೂ ಮುಗಿಸಲಿಕ್ಕೆ ಇಲಾಖೆಯವರು ಸಿದ್ಧವಾಗಿಲ್ಲ. ಮತ್ತು ಈ ಯೋಜನೆಗಳನ್ನು ಅಲ್ಲಿ ಇವರಿಗೆ ಕಾರ್ಯಗತ ಮಾಡುವುದಕ್ಕೂ ಸಾಧ್ಯವಾಗುತ್ತಿಲ್ಲ. ಆ ಜನಕ್ಕೆ ಬಹಳಷ್ಟು ತೊಂದರೆಯಾಗುತ್ತಿದೆ. ಇದನ್ನು ಸರ್ಕಾರ ಹೇಗೆ ನಿವಾರಣೆ ಮಾಡುತ್ತದೆ? ಇದರ ಕೂಡ ಆದಷ್ಟು ಬೇಗ ಮಾಡಿ. ಇಲ್ಲದಿದ್ದರೆ ಹಳೆ ಸ್ಕೀಮ್‌ಗಳನ್ನು ಆದಷ್ಟು ವೇಗವಾಗಿ ಮುಂದುವರಿಸಬೇಕು. ಮತ್ತು ಆದಷ್ಟು ಬೇಗ ಮುಗಿಸಬೇಕು, ಇಲ್ಲ ಈ ಕಾರ್ಯಕ್ರಮಗಳನ್ನು ಪ್ರಾರಂಭ ಮಾಡಬೇಕು. ಅದೂ ಅಲ್ಲದೇ ಇದನ್ನು ಈ ಸಮಿತಿ ಹೋದವರ್ಷ ಪರಿಶೀಲನೆ ಮಾಡುವಾಗ, ಅಧಿಕಾರಿಗಳ ಕೊರತೆ ಬಹಳಷ್ಟು ಮುಖ್ಯವಾಗಿ ಇದೆಯೆಂದು ಗೊತ್ತಾಯಿತು. ಬಹಳ ಮುಖ್ಯವಾಗಿ ಅಧಿಕಾರಿಗಳ ಕೊರತೆಯಿಂದಾಗಿ ಕಾರ್ಯಕ್ರಮವನ್ನು ಬೇಗ ಜಾರಿಮಾಡುವುದಕ್ಕೆ ಸಾಧ್ಯವಾಗಲಿಲ್ಲ ಎಂದು ಹೇಳಿದರು. ಈ ಅಧಿಕಾರಿಗಳ ಕೊರತೆ ಅದೇ ರೀತಿಯಾಗಿ ಮುಂದುವರೆದಿದೆ. ನಾವು ಸಂಪರ್ಕಮಾಡಿದಾಗೆಲ್ಲಾ, ನಮಗೆ ನೇರವಾಗಿ ಬರುವ ನೆದರ್‌ಲ್ಯಾಂಡ್ ಯೋಜನೆಗೆ ಅಧಿಕಾರಿಗಳು ಆರು ತಿಂಗಳು ಇದ್ದರೆ, ಮತ್ತು ಆರು ತಿಂಗಳು ಅವರು ಇರುವುದಿಲ್ಲ. ಇದಕ್ಕೆ ಏನಾದರೂ ಪರಿಹಾರ, ಎರವಲಾಗಿ ಪಡೆದು ಅಥವಾ ನೇರ ನೇಮಕಾತಿಯಾದರೂ ಮಾಡಿ ಪರಿಹಾರ ಮಾಡಿದ್ದಾರಾ ಎಂಬುದನ್ನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್:- ಸನ್ಮಾನ್ಯ ಅಧ್ಯಕ್ಷರೇ, ಬಹಳ ಮುಖ್ಯವಾದ ವಿಷಯವನ್ನು ಮಾನ್ಯ ಶಾಸಕರು ಪ್ರಸ್ತಾಪ ಮಾಡಿದ್ದಾರೆ. ಈ ಡೆನಿಡಾ ಕಾರ್ಯಕ್ರಮ ಮೂಲಕವಾಗಿ ಮತ್ತು ನೆದರ್‌ಲ್ಯಾಂಡ್‌ನ ಎರಡು ಕಾರ್ಯಕ್ರಮಗಳ ಮೂಲಕವಾಗಿ ಕೂಡ ನಾವು ಬೇರೆ ದೇಶಗಳ ಒಂದು ಸಹಾಯವನ್ನು ಪಡೆಯುತ್ತಿದ್ದೇವೆ. ಡೆನಿಡಾ ಯೋಜನೆಯಲ್ಲಿ ತಾವು ಆಗಲೇ ಹೇಳಿದಂತೆ ತ್ವರಿತ ಗತಿಯಲ್ಲಿ ಕೆಲಸ ಆಗಬೇಕಾಗಿತ್ತು. ಹಿಂದಿನ ಸರ್ಕಾದ ಕಾಲದಲ್ಲಿ ಆ ಕೆಲಸ ಆಗಿರಲಿಲ್ಲ. ಇದಾದ ನಂತರ ಪ್ರಾಯೋಗಿಕವಾಗಿ ಕೋಲಾರ ಜಿಲ್ಲೆಯ ಬಾಗೇಪಲ್ಲಿ, ಚಿತ್ರದುರ್ಗ ಜಿಲ್ಲೆಯ ಜಗಳೂರು, ಹಾಗೂ ಬಿಜಾಪುರ ಜಿಲ್ಲೆಯ ಹುನಗಂದ ಮೂರು ತಾಲ್ಲೂಕುಗಳನ್ನು ತೆಗೆದುಕೊಂಡು 12.1 ಕೋಟಿ ರೂಪಾಯಿಗಳ ಖರ್ಚುಮಾಡಿ ಪ್ರಸ್ತಾವನೆ ಮುಗಿದಮೇಲೆ ಬಾಗೇಪಲ್ಲಿ ತಾಲ್ಲೂಕಿನ ಮಿಟ್ಟೇಮರಿ ಎನ್ನುವಂಥ ಗ್ರಾಮದಲ್ಲಿ ಡೆನ್ಮಾರ್ಕ್ ರಾಜ್ಯ ಪ್ರಧಾನಮಂತ್ರಿಯವರನ್ನು ಕರೆಸಿ ತೋರಿಸಿದ ನಂತರ, ನಾವು ಅವರಿಗೆ ಒಂದು ವ್ಯಾಪಕವಾದ ಕಾರ್ಯಕ್ರಮವನ್ನು ಕೊಟ್ಟೆವು. 51

ಕೋಟ ರೂಪಾಯಿಗಳ ಯೋಜನೆಯನ್ನು ಕೊಟ್ಟ ನಂತರ ಡೆನ್ಮಾರ್ಕ್‌ನವರು ಆ ಯೋಜನೆಗೆ ಮಂಜೂರಾತಿಯನ್ನು ಮಾಡಿದ್ದಾರೆ. ಅದಕ್ಕೆ ಈಗ ಕೋಲಾರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳು ಚಿತ್ರದುರ್ಗ ಜಿಲ್ಲೆಯ, ಎಲ್ಲಾ ತಾಲ್ಲೂಕುಗಳು, ಬಿಜಾಪುರ ಜಿಲ್ಲೆಯ ಎಲ್ಲ ತಾಲ್ಲೂಕುಗಳನ್ನು ಕೂಡ ಈ ರೀತಿಯಾದ ಕಾರ್ಯಕ್ರಮದ ವ್ಯಾಪ್ತಿಯಲ್ಲಿ ತೆಗೆದುಕೊಳ್ಳುತ್ತಾರೆ. ಇದರಲ್ಲಿ ನೆದರ್‌ಲ್ಯಾಂಡ್‌ಗೆ ಸಂಬಂಧಪಟ್ಟಿರತಕ್ಕಂಥಾದ್ದು ಮಾನ್ಯ ಶಾಸಕರ ವ್ಯಾಪ್ತಿಯಲ್ಲಿ ಬರುವಂಥ ವಿಶ್ವಬ್ಯಾಂಕ್ ಯೋಜನೆಯ ಮಾಪನವನ್ನೇ ಅವರು ಇಟ್ಟುಕೊಂಡಿದ್ದರಿಂದ ಅವರು ಶೇಕಡಾ 150ರಿಂದ 160 ಹೆಚ್ಚುವರಿಯಾಗಿರತಕ್ಕಂಥ ಟೆಂಡರ್‌ನ್ನು ಕರೆದಿದ್ದಾರೆ. ಏಕೆಂದರೆ ಅದರ ನಿಯಮಾವಳಿಗಳ ಪ್ರಕಾರ ಇಂತಹ ಕುಡಿಯುವ ನೀರಿನ ಯೋಜನೆಗಳಿಗೆ 50 ಕೋಟಿಗಿಂತ ಹೆಚ್ಚು ಖರ್ಚುಮಾಡಿದಂಥ ಗುತ್ತಿಗೆದಾರರು ಮಾತ್ರ ಇದರಲ್ಲಿ ಭಾಗವಹಿಸಬೇಕು ಎನ್ನುವಂಥ ಷರತ್ತುಗಳು ಇದ್ದುದರಿಂದ, ಅವರು ಕೇವಲ ಸ್ವಲ್ಪವೇ ಜನರುಗಳು ಇದ್ದುದರಿಂದ 150ರಿಂದ 160 ಪರ್ಸೆಂಟ್ ಹೆಚ್ಚು ಹಾಕಿದ್ದರಿಂದ, ಅದನ್ನು ನಾವು ರದ್ದುಮಾಡಿ ಈಗ ಹೊಸದಾಗಿ ಟೆಂಡರ್‌ನ್ನು ನಾವು ಕರೆದಿದ್ದೇವೆ. ನಾಳೆ ಟೆಂಡರ್‌ನ್ನು ತೆಗೆಯುತ್ತಿದ್ದಾರೆ. ಆದ್ದರಿಂದ ನೆದರ್‌ಲ್ಯಾಂಡ್‌ಗೆ ಸಂಬಂಧಪಟ್ಟಿರತಕ್ಕಂಥಾದ್ದು ಯೋಜನೆ ಏನಿದೆ, ಧಾರವಾಡ ಜಿಲ್ಲೆಯಲ್ಲಿ ಆಗಿರತಕ್ಕಂಥಾದ್ದು, ಮತ್ತು ಬಿಜಾಪುರ ಜಿಲ್ಲೆಯ ಬಗಲಾಯಿ ಮೊದಲಾದ ಗ್ರಾಮಗಳಿಗೆ ಸಂಬಂದಿಸಿರತಕ್ಕಂಥಾದ್ದು ಏನಿದೆ, ಅದನ್ನು ತ್ವರಿತಗತಿಯಲ್ಲಿ ಕೆಲಸ ಮಾಡುತ್ತಿದ್ದೇವೆ. ಮಾನ್ಯ ಶಾಸಕರಾದ ಶ್ರೀ ಯಾವಗಲ್ ಅವರು ಹೇಳಿದಂತೆ, ನಮ್ಮ ವಿಶ್ವಬ್ಯಾಂಕ್ ಯೋಜನೆಯಲ್ಲಿ ಕೆಲಸ ಪ್ರಾರಂಭವಾಗದೇ ಇದ್ದುದರಿಂದ ಅನೇಕ ಇಂಜಿನಿಯರುಗಳನ್ನು ನಾವು ನೇಮಕಾತಿ ಮಾಡಿದರೂ ಕೂಡ, ವರ್ಗಾವಣೆ ಮಾಡಿದರೂ ಕೂಡ ಅವರು ಅಲ್ಲಿಗೆ ಬಂದು ಕೆಲಸಕ್ಕೆ ಸೇರುತ್ತಾ ಇಲ್ಲ. ಇದಕ್ಕೆ ನಮ್ಮ ಒತ್ತಡ, ಬೇರೆಬೇರೆಯವರ ಒತ್ತಡಗಳು, ತಮಗೆ ಗೊತ್ತಿರುವಂತೆ ಪ್ರಜಾಪ್ರಭುತ್ವದಲ್ಲಿ ಅನೇಕ ಒತ್ತಡಗಳು ಬರುತ್ತವೆ, ಬೇರೆಬೇರೆಯವರ ಒತ್ತಡಗಳು ಬಂದು ನಾವು ಅವರ ಮುಲಾಜಿನಲ್ಲಿ ಇರುತ್ತೇವೆ. ವಿಶ್ವಬ್ಯಾಂಕ್ ಯೋಜನೆಯಲ್ಲಿ ಹೆಚ್ಚು ಕೆಲಸಗಳು ಇಲ್ಲ ಎನ್ನುವ ಒಂದೇ ಒಂದು ಕಾರಣಕ್ಕಾಗಿ ಇಂಜಿನಿಯರುಗಳು ಹೆಚ್ಚು ಬರುತ್ತಾ ಇಲ್ಲ. ಈಗ ಒತ್ತಾಯ ಮಾಡಿ ಮಾಡುತ್ತಿದ್ದೇವೆ. ಈಗ ಸ್ವಲ್ಪಮಟ್ಟಿಗೆ ಸುಧಾರಣೆ ಈಗಾಗಲೇ ಆಗಿದೆ. ಆದ್ದರಿಂದ ಈ ವಿಶ್ವಬ್ಯಾಂಕ್ ಯೋಜನೆ ಮತ್ತು ನೆದರ್‌ಲ್ಯಾಂಡ್ ಹಾಗೂ ಡೆನ್ಮಾರ್ಕ್ ಯೋಜನೆಯ ಕೆಲಸಗಳು ಈಗ ಪ್ರಾರಂಭ ಆಗುತ್ತಿರುವುದರಿಂದ ಅಧಿಕಾರಿಗಳೂ ಕೂಡ ಅಲ್ಲಿಗೆ ಬರುವುದಕ್ಕೆ ಪ್ರಾರಂಭ ಮಾಡಿದ್ದಾರೆ. ತಾವು ಸೂಚಿಸಿದ ಸಲಹೆಯ ಮೇರೆಗೆ ಒತ್ತಡಗಳಿಗೆ ಒಳಗಾಗದೆ ಅಲ್ಲಿ ಯಾರನ್ನು ನಾವು ನೇಮಕಾತಿ ಮಾಡಿರುತ್ತೇವೆ, ಅವರ ವರ್ಗಾವಣೆಯನ್ನು ಆದಷ್ಟು ಮಟ್ಟಿಗೆ ತಡೆಯಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ ಎಂದು ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಆರ್.ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಪರದೇಶದ ಸಹಾಯದಿಂದ ಪ್ರಾರಂಭಿಸುವ ಯೋಜನೆಗಳಿಗೆ ಜಿಲ್ಲೆಗಳನ್ನು ಏನು ಆಯ್ಕೆ

ಮಾಡುತ್ತೀರಿ, ಇದಕ್ಕೆ ಇದಕ್ಕ ಮಾನದಂಡ ಏನು? ನಿಮ್ಮ ಈ ಪಟ್ಟಿ ನೋಡಿದರೆ, ಮುಂಬೈ ಕರ್ನಾಟಕಕ್ಕೆ ಸ್ವಲ್ಪ ಅನ್ಯಾಯವಾಗಿದೆ ಎನ್ನಿಸುತ್ತದೆ. ಅದನ್ನು ಏನಾದರೂ ಸರಿಪಡಿಸುತ್ತೀರೋ?

ಶ್ರೀ ಎಂ.ಪಿ.ಪ್ರಕಾಶ್:- ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ 12 ಜಿಲ್ಲೆಗಳನ್ನು 12 ನೂರು ಗ್ರಾಮಗಳನ್ನು ವಿಶ್ವಬ್ಯಾಂಕ್ ಯೋಜನೆಯ ಕೆಳಗೆ ತೆಗೆದುಕೊಳ್ಳಲಾಗಿದೆ. ಇದು ನಮ್ಮ ಸರ್ಕಾರ ಬರುವುದಕ್ಕಿಂತ ಪೂರ್ವದಲ್ಲಿಯೇ ಆಗಿರತಕ್ಕಂಥ ಆಯ್ಕೆ. ಇದರಲ್ಲಿ ನಮ್ಮದೇನೂ ಪ್ರಶ್ನೆ ಬರುವುದಿಲ್ಲ. ನೆದರ್‌ಲ್ಯಾಂಡ್ಸ್ ವಿಚಾರದಲ್ಲಿ ಬಂದಾಗ, ಅದರ ಯೋಜನೆಯ ಕೆಳಗೆ, ಇಡೀ ಧಾರವಾಡ ಜಿಲ್ಲೆಯನ್ನು ಕೂಡ ತೆಗೆದುಕೊಂಡಿದ್ದಾರೆ. ಮತ್ತೆ ಡೆನ್ಮಾರ್ಕಿನ ಯೋಜನೆಯೊಳಗೆ ಬಿಜಾಪುರ ಜಿಲ್ಲೆಯ ತಾಲ್ಲೂಕನ್ನು ತೆಗೆದುಕೊಂಡಿದ್ದಾರೆ. ತಾವು ಹೇಳಿದಂತೆ ಏನಾದರೂ ಅಸಮಾನತೆ ಇದ್ದರೆ, ಖಂಡಿತವಾಗಿಯೂ ಸರಿಪಡಿಸುತ್ತೇವೆಂದು ಹೇಳುತ್ತೇನೆ.

ಶ್ರೀ ಕೆ.ಜಯರಾಮಶೆಟ್ಟಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ಉತ್ತರದಲ್ಲಿ ಕುಡಿಯುವ ನೀರಿನ ಬಗ್ಗೆ ಉಲ್ಲೇಖ ಮಾಡಿದ್ದಾರೆ. ನೈರ್ಮಲ್ಯೀಕರಣ ಯೋಜನೆಯ ಪ್ರಕಾರ, ಯಾವ ಯಾವ ಕಾರ್ಯಕ್ರಮಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಹಮ್ಮಿಕೊಳ್ಳುತ್ತೇವೆಂಬ ವಿವರಗಳನ್ನು ಕೊಡುತ್ತೀರೋ? ಎರಡನೆಯದು, ನೈರ್ಮಲೀಕರಣದ ಬಗ್ಗೆ ಗ್ರಾಮಸ್ಥರಿಂದಲೇ ಶೇಕಡ 30 ಪಾಲು ಭರಿಸಬೇಕೆಂಬ ವಿಚಾರ ಉಂಟು. ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಲಯನ್ಸ್ ಕ್ಲಬ್‌ನಂತಹ ಸೇವಾ ಸಂಸ್ಥೆಗಳು ಇಲ್ಲದೇ ಇರುವುದರಿಂದ, ಕೆಲವು ಸಂದರ್ಭದಲ್ಲಿ ಗ್ರಾಮಸ್ಥರೇ ಶ್ರಮದಾನದ ಮುಖಾಂತರ ಏನಾದರೂ ಕಾರ್ಯಕ್ರಮ ಮಾಡಿದರೆ, ಅದರ ಹಣವನ್ನು ದುರುಪಯೋಗ ಮಾಡುವಂಥ ಪರಿಸ್ಥಿತಿ ಇರುವುದರಿಂದ, ಶೇಕಡ 30 ಹಣವನ್ನು ತೆಗೆದುಕೊಳ್ಳುವ ವಿಚಾರವನ್ನು ಕೈಬಿಟ್ಟು, ಪೂರ್ಣಪ್ರಮಾಣದಲ್ಲಿ ಸರ್ಕಾರವೇ ಅದನ್ನು ಭರಿಸಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಅದರೊಂದಿಗೆ ವಿಶ್ವಬ್ಯಾಂಕ್ ಯೋಜನೆ, ಮಂಗಳೂರು ತಾಲ್ಲೂಕಿನಲ್ಲಿ, ನನ್ನ ಕ್ಷೇತ್ರದಲ್ಲಿ ಎರಡು ಮೂರು ತಾಲ್ಲೂಕಿನಲ್ಲಿ ಅಳವಡಿಸಲಾಗಿದೆ. ಕಳೆದ ಮೂರು ವರ್ಷಗಳಿಂದ ಅದರ ಪ್ರಗತಿ ಏನೂ ಇಲ್ಲ. ಸರ್ಕಾರ ಆ ಬಗ್ಗೆ ಮುಂಜಾಗ್ರತೆ ತೆಗೆದುಕೊಂಡು, ಆ ಇಲಾಖೆಯ ಬಗ್ಗೆ ಹೆಚ್ಚು ಒತ್ತು ಕೊಡಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಎಂ.ಪಿ.ಪ್ರಕಾಶ್:- ಸನ್ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಶಾಸಕರಾದ ಶಿವರಾಮ್‌ರವರ ಪ್ರಶ್ನೆಗೆ ಉತ್ತರ ಕೊಡುವಾಗ ತಾವು ಗಮನಿಸಲಿಲ್ಲವೆಂದು ಕಾಣುತ್ತದೆ. ಪರಿಸರ ನೈರ್ಮಲ್ಯದ ವಿಚಾರಕ್ಕೆ ಸಂಬಂಧಪಟ್ಟಂತೆ, ಶೌಚಾಲಯಗಳನ್ನು ಕಟ್ಟುವುದು, ಚರಂಡಿ ಮಾಡತಕ್ಕಂತಾದ್ದು, ದೂರ ರಹಿತವಾದಂಥ ರಸ್ತೆಗಳನ್ನು ಕಟ್ಟುವಂತಾದ್ದು, ವೈಯಕ್ತಿಕ ಶೌಚಾಲಯ ನಿರ್ಮಾಣ ಮಾಡತಕ್ಕಂತಾದ್ದು ಕಾರ್ಯಕ್ರಮ. ನಾವು ಬೇರೆ ಮೂಲಗಳಿಂದ ಅಥವಾ ಜವಹರಲಾಲ್ ರೋಜ್‌ಗಾರ್ ಯೋಜನೆಯ ಶೇಕಡ 80ರ ಅನುದಾನದಲ್ಲಾಗಲೀ, ಅಥವಾ ಬೇರೆ ಕಡೆಯಿಂದ ಸರ್ಕಾರದವರು ಹಣವನ್ನು

ಭರ್ತಿಮಾಡಿಕೊಡುತ್ತೇವೆಂದರೂ ಕೂಡ, ವಿಶ್ವಬ್ಯಾಂಕ್ ಯೋಜನೆಯ ಷರತ್ತಿನ ಕೆಳಗೆ, ಅದನ್ನು ಮಾಡುವುದಕ್ಕೆ ಬರುವುದಿಲ್ಲವೆಂದು ಅವರು ಹಠ ಹಿಡಿಯುತ್ತಿದ್ದಾರೆ. ಇದು ಪಾಲ್ಗೊಳ್ಳುವಿಕೆ ಸಂಸ್ಕೃತಿ ಎಂಬುದು ಇರಬೇಕಾಗುತ್ತದೆ. ಆಗ ಮಾತ್ರ ಆ ಊರಿನ ಜನ, ಅದರ ಲಾಭ ಪಡೆಯತಕ್ಕಂತಾವರು ಇದರಲ್ಲಿಯೂ ಕೂಡ ನಾವು ತೊಡಗಿಕೊಂಡಿದ್ದೇವೆನ್ನುವುದು ಮುಖ್ಯ ತತ್ವ ಎನ್ನುವ ಮಾತನ್ನು ಅವರು ಹೇಳುತ್ತಿದ್ದಾರೆ. ಇದು ವಿಶ್ವಬ್ಯಾಂಕ್ ಯೋಜನೆಯಾಗಿರುವುದರಿಂದ, ತಮಗೆ ಗೊತ್ತಿದ್ದಂತೆ, ಅನುದಾನವನ್ನು ಪಡೆಯತಕ್ಕಂಥವರು ಷರತ್ತನ್ನು ವಿಧಿಸುವುದಕ್ಕೆ ನಮ್ಮ ಕೈಲಿ ಸಾಧ್ಯ ಆಗುತ್ತಾ ಇಲ್ಲ. ಆದರೂ ಕೂಡ ಬೇರೆ ಮೂಲಗಳಿಂದ ಕೊಡತಕ್ಕಂಥ ಪ್ರಯತ್ನ ಮಾಡುತ್ತೇವೆ. ತಾವು ಹೇಳಿದಂತೆ, ಶ್ರಮದಾನ ಮಾಡಲಿಕ್ಕೂ ಅವಕಾಶ ಇದೆ. ಸಾಮಗ್ರಿಗಳನ್ನು ಕೊಡುವುದಕ್ಕೂ ಅವಕಾಶ ಇದೆ. ಸಾಮಗ್ರಿಗಳ ರೂಪದಲ್ಲಾಗಲೀ, ಶ್ರಮದಾನದ ರೂಪದಲ್ಲಾಗಲೀ ಅಥವಾ ಹಣದ ಮೂಲಕವಾಗಲೀ, ಶೇಕಡ 30 ಭಾಗವನ್ನು ತಾವು ಭರಿಸಿದರೆ, ಖಂಡಿತವಾಗಿಯೂ ಕೆಲಸ ಪ್ರಾರಂಭವಾಗುತ್ತದೆ.

ಶ್ರೀ ಲಿಂಗಜ್ಞಾನೇಂದ್ರ:- ಸನ್ಮಾನ್ಯ ಅಧ್ಯಕ್ಷರೇ, ವಿಶ್ವಬ್ಯಾಂಕ್ ನೆರವಿನ ಕುಡಿಯುವ ನೀರು ಮತ್ತು ನೈರ್ಮಲೀಕರಣ ಯೋಜನೆಯಲ್ಲಿ ಈಗಾಗಲೇ ತಾವು ಹೇಳಿದಂಥ ಜಿಲ್ಲೆಗಳ ಪ್ರಕಾರ, ಬಯಲುಸೀಮೆ ತಾಲ್ಲೂಕುಗಳಿಗೆ ಹೆಚ್ಚು ಉಪಯೋಗವಾಗಿದೆ. ಒಂದು ನಾರಮ್ಸ್ ಇದೆ. ಜನಸಂಖ್ಯೆ ಆಧಾರದ ಮೇಲೆ, ಈ ಯೋಜನೆಯಲ್ಲಿ ಕೊಡುತ್ತಾ ಇದ್ದೇವೆ. ಆದರೆ, ಇದು ಮಲೆನಾಡಿನ ತಾಲ್ಲೂಕುಗಳಿಗೆ ತೀರಾ ಅನ್ಯಾಯವಾಗುತ್ತಿದೆ. ತೀರ್ಥಹಳ್ಳಿ ತಾಲ್ಲೂಕಿನ ನನ್ನ ಕ್ಷೇತ್ರದಲ್ಲಿ, ಕೇವಲ ಮೊದಲನೇ ಹಂತದಲ್ಲಿ ಎರಡು ಗ್ರಾಮಗಳು, ಎರಡನೇ ಹಂತದಲ್ಲಿ ಒಂದು ಗ್ರಾಮ ಮಾತ್ರ ಇದರಲ್ಲಿ ಅಳವಡಿಸುವುದಕ್ಕೆ ಬರುತ್ತದೆ. ಮತ್ತು ಯಾವುದೂ ಕೂಡ ಅಳವಡಿಸಿಕೊಳ್ಳುವುದಕ್ಕೆ ಬರುವುದಿಲ್ಲ. ಈ ಯೋಜನೆಯ ನೆರವನ್ನು ನಾವು ಪಡೆಯಬೇಕಾದರೆ, ಮಲೆನಾಡು ತಾಲ್ಲೂಕಿಗೆ ಜನಸಂಖ್ಯೆಯ ಒಂದು ನಾರಮ್ಸ್‌ನ್ನು ಸಡಿಲ ಮಾಡುವಂಥ ಯಾವುದಾದರೂ ಅಭಿಪ್ರಾಯ ಸರ್ಕಾರದಲ್ಲಿದೆಯೇ?

ಶ್ರೀ ಎಂ.ಪಿ.ಪ್ರಕಾಶ್:- ಸನ್ಮಾನ್ಯ ಅಧ್ಯಕ್ಷರೇ, ಮಲೆನಾಡಿನಲ್ಲಿ ಜನಸಾಂದ್ರತೆ ಬಹಳ ಕಡಿಮೆ ಇರುವುದರಿಂದ, ಮತ್ತು ಬೇರೆ ಬೇರೆ ಕಡೆಗಳಲ್ಲಿ ಜನವಸತಿ ಪ್ರದೇಶಗಳಿರುವುದರಿಂದ, ಅವರಿಗೆ ತೊಂದರೆಯಾಗುತ್ತದೆಂಬುದು ಒಪ್ಪುವ ಮಾತು. ಬರೀ ವಿಶ್ವಬ್ಯಾಂಕ್ ಯೋಜನೆಗೇ ಇದು ಸೀಮಿತವಾಗುವಂತಾದ್ದಲ್ಲ. ಐಆರ್‌ಡಿಪಿ ಆಗಿರಬಹುದು ಅಥವಾ ಕೇಂದ್ರಸರ್ಕಾರ, ರಾಜ್ಯಸರ್ಕಾರ ರೂಪಿಸುವಂಥ ಎಲ್ಲಾ ಕಾರ್ಯಕ್ರಮಗಳಲ್ಲೂ ಕೂಡ ಇಂತಹ ಸ್ವಲ್ಪ ದ್ವಂದ್ವಗಳು ಮತ್ತು ಕೆಲವು ಅಸಮಾನತೆಗಳು ಆಗುತ್ತವೆ. ಆದರೆ, ನೈಸರ್ಗಿಕವಾಗಿ ಮಲೆನಾಡಿನವರಿಗೆ, ಸಂಪೂರ್ಣವಾದಂಥ ದೇವರ ಆಶೀರ್ವಾದ ಇರುವುದರಿಂದ, ಬಯಲುಸೀಮೆಗಿಂತಲೂ ಹೆಚ್ಚು ಗುಣಮಟ್ಟವನ್ನು ತಾವು ಕಾಪಾಡಿಕೊಂಡಿದ್ದೀರಿ. ಆದ್ದರಿಂದ ಸ್ವಲ್ಪಮಟ್ಟಿಗೆ ಸಹಿಸಿಕೊಳ್ಳಬೇಕೆಂದು ತಮ್ಮ ಮೂಲಕ ಅವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎನ್.ಯೋಗೀಶ್ ಭಟ್:- ಸನ್ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಡ್ಯಾನಿಡಾ ಪರಿಸರ ಅಧ್ಯಯನ ಸಂಸ್ಥೆ, ಸಮಗ್ರ ಅಭಿವೃದ್ಧಿ ಯೋಜನೆಗೊಸ್ಕರ, 40ರಿಂದ 50 ಕೋಟಿಯಷ್ಟು ಕಾರ್ಯಕ್ರಮಗಳು, ಅದರಲ್ಲೂ ವಿಶೇಷವಾಗಿ ಕುಡಿಯುವನೀರು ಮತ್ತು ಇನ್ನಿತರ ಸ್ಯಾನಿಟರಿಗೆ ಸಂಬಂಧಪಟ್ಟ ಸೌಲಭ್ಯಗಳನ್ನು ಕೊಡುವಂಥ ಒಂದು ಯೋಜನೆ ಇದೆ. ಆದರೆ, ಕಳೆದ ಒಂದೂವರೆ ವರ್ಷದಿಂದ ನಾನು ನಿರಂತರವಾಗಿ ಪ್ರಯತ್ನ ಪಡುತ್ತಿದ್ದೇನೆ. ಸಂಬಂಧಪಟ್ಟ ಡಿಪಾರ್ಟ್‌ಮೆಂಟ್ ಇದಕ್ಕೆ ಕ್ಲಿಯರೆನ್ಸ್ ಕೊಡುವುದಕ್ಕೆ ಸಾಧ್ಯವಾಗಿಲ್ಲ. ನಮ್ಮ ಕಡೆಯಿಂದ ಯಾವುದೇ ಆರ್ಥಿಕ ಹೊರೆ ಬರುವುದಿಲ್ಲ. ಅಂತಹ ಸಂದರ್ಭದಲ್ಲೂ ಕ್ರಿಯರೆನ್ಸ್ ಕೊಡುವುದು ಏನು ಕಷ್ಟ ಬಂದಿದೆ ಎಂಬುದಕ್ಕೆ ಸರ್ಕಾರದ ಗಮನ ಸೆಳೆಯುತ್ತೇನೆ. ಇದು ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟ ಡ್ಯಾನಿಡಾ ಪರಿಸರ ಅಧ್ಯಯನ ಸಂಸ್ಥೆಯ ಸಮಗ್ರ ಅಭಿವೃದ್ಧಿ ಯೋಜನೆಗೆ ಸಂಬಂಧಪಟ್ಟ ವಿಚಾರ.

ಶ್ರೀ ಎಂ.ಪಿ.ಪ್ರಕಾಶ್:- ಸನ್ಮಾನ್ಯ ಅಧ್ಯಕ್ಷರೇ, ಇದು ನೇರವಾಗಿ ಈ ಪ್ರಶ್ನೆಗೆ ಸಂಬಂಧವಿಲ್ಲದಿದ್ದರೂ ಕೂಡ, ಡ್ಯಾನಿಡಾ ಯೋಜನೆಯ ಕೆಳಗೆ ಬರುತ್ತಿದ್ದರೆ, ಅವರು ನಮ್ಮ ಜೊತೆಗೆ ನಿರಂತರವಾಗಿ ಸೌಹಾರ್ದ ಮತ್ತು ಸಂಪರ್ಕದಲ್ಲಿರುತ್ತಾರೆ. ಅವರದೇ ಆಗಿರತಕ್ಕ ಒಬ್ಬ ಅಧಿಕಾರಿ ಬೆಂಗಳೂರು ಮಟ್ಟದಲ್ಲಿ ಇದ್ದಾರೆ. ಆದ್ದರಿಂದ, ನಮ್ಮ ಸರ್ಕಾರದ ಪರವಾಗಿ ಯಾವುದೇ ರೀತಿಯ ವಿಳಂಬ ಆಗಿಲ್ಲ. ವಿವರಗಳು ಏನಾದರೂ ಇದ್ದರೆ, ಅವುಗಳನ್ನು ಕೊಟ್ಟರೆ, ತಕ್ಷಣದಲ್ಲಿಯೇ ನಾನು ಕ್ರಮವನ್ನು ಕೈಗೊಳ್ಳುತ್ತೇನೆಂದು ಭರವಸೆ ಕೊಡುತ್ತೇನೆ.

ಶ್ರೀ ಬಿ.ಆರ್.ಯಾವಗಲ್:- ಮಾನ್ಯ ಅಧ್ಯಕ್ಷರೇ, ಯಾವ ಹಳ್ಳಿಗಳಲ್ಲಿ ಈ ಕಾರ್ಯಕ್ರಮ ಜಾರಿಗೊಳಿಸುತ್ತಿದ್ದೀರಿ. ಕಳೆದ 4 ವರ್ಷಗಳಿಂದ, ಅಲ್ಲಿ ಒಂದು ವೇಳೆ ಪ್ರಾರಂಭ ಮಾಡಿದ್ದರೆ, ಕುಡಿಯುವ ನೀರಿನ ಯೋಜನೆಗಳನ್ನು ಪ್ರಾರಂಭ ಮಾಡಿದ್ದರೆ, ಅದೇ ಸ್ಥಿತಿಯಲ್ಲಿ ಅವುಗಳನ್ನು ನಿಲ್ಲಿಸಲಾಗಿದೆ. ನೆಪ ಹೇಳುವುದು, ಈ ಒಂದು ಕಾರ್ಯಕ್ರಮ ಇಲ್ಲಿ ಜಾರಿಗೊಳಿಸುವುದಕ್ಕೆ ಎಲ್ಲಾ ಸಿದ್ಧತೆ ಆಗದಿರುವುದರಿಂದ, ನಾವು ಮುಂದುವರಿಸುವುದಿಲ್ಲವೆಂದು ಹೇಳುತ್ತಾರೆ. ಇನ್ನೊಂದು ಎಲ್ಲಿ ಪ್ರಾರಂಭವಾಗಿಲ್ಲ, ಬೇರೆ ಕಾರ್ಯಕ್ರಮ ಅದು ಎನ್‌ಆರ್‌ಡಬ್ಲ್ಯುಎನ್‌ನಲ್ಲಿರಬಹುದು, ಎಆರ್‌ಡಬ್ಲ್ಯುಎಸ್ ಕೆಳಗಡೆ ಇರಬಹುದು, ಅವರು ಕೈಗೆತ್ತಿಕೊಳ್ಳುವುದಕ್ಕೆ ತಯಾರಿಲ್ಲ. ಇದರಿಂದಾಗಿ, ಅಲ್ಲಿ ಕುಡಿಯುವ ನೀರಿನ ದೊಡ್ಡ ಸಮಸ್ಯೆಯಾಗಿದೆ. ನಾವೇನು ಒತ್ತಾಯ ತಂದರೂ ಅದಕ್ಕೆ ಅವರು ಒಪ್ಪುತ್ತಾ ಇಲ್ಲ. ಆ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕು. ಇಲ್ಲದಿದ್ದರೆ ಇವುಗಳನ್ನಾದರೂ ಬೇಗ ಪರಿವರ್ತನೆ ವ್ಯವಸ್ಥೆ ಮಾಡಬೇಕು. ಇದಕ್ಕೆ ಏನಾದರೂ ಪರಿಹಾರ ಮಾನ್ಯಮಂತ್ರಿಗಳು ಸೂಚನೆ ಮಾಡಬೇಕು.

ಶ್ರೀ ಎಂ.ಪಿ.ಪ್ರಕಾಶ್:- ಸನ್ಮಾನ್ಯ ಅಧ್ಯಕ್ಷರೇ, ಬಹಳ ಮುಖ್ಯವಾಗಿರುವಂಥ ಹೊಂದರೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗಾಗಲೇ ನಾನು ಅರಿಕೆ ಮಾಡಿಕೊಂಡಂತೆ ಸುಮಾರು ಎರಡೂವರೆ ವರ್ಷಗಳ ಕಾಲ, ಟೆಂಡರ್‌ನ್ನು ನಿರ್ಣಯ ಮಾಡತಕ್ಕಂಥ

ವಿಚಾರದಲ್ಲಿಯೇ ಬಹಳ ತೊಂದರೆಯಾಗಿತ್ತು. ಎರಡನೆಯ ಪ್ರಶ್ನೆ, ಪರಿಸರ ನೈರ್ಮಲ್ಯಕ್ಕೆ ಸಂಬಂಧಪಟ್ಟಂತೆ, ವಿಚಾರದಲ್ಲಿ ಶೇಕಡ 30ರ ಭಾಗವನ್ನು ಕಟ್ಟಬೇಕಾದಂಥ ಗ್ರಾಮಾಂತರ ಪ್ರದೇಶದ ಜನ, ಕೆಲವು ಬಡತನವಾಗಿರಬಹುದು ಅಥವಾ ನಾಯಕತ್ವದ ಕೊರತೆ ಆಗಿರಬಹುದು, ಆ ಕಾರಣಕ್ಕಾಗಿ ಹಣ ಕಟ್ಟುವುದಕ್ಕೆ ಮುಂದೆ ಬರುತ್ತಾ ಇಲ್ಲ. ಇವುಗಳೆಲ್ಲಾ ವಿಶ್ವಬ್ಯಾಂಕ್ ಯೋಜನೆಯ ಕೆಳಗೆ ಇವೆ ಅಥವಾ ಬೇರೆ ಯೋಜನೆಯ ಕೆಳಗೆ ಇವೆ ಎನ್ನುವುದರಿಂದ, ಮಾಮೂಲಿಯಾಗಿರತಕ್ಕಂಥ ಯೋಜನೆಗಳನ್ನು ಕೂಡ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಅವರು ಬಹಳ ತೊಂದರೆಯಲ್ಲಿದ್ದಾರೆ. ಮಾನ್ಯ ಶಿವರಾಮುರವರ ಪ್ರಶ್ನೆಯಲ್ಲಿ ಯಾವುದೇ ಕಾರಣಕ್ಕೂ ಇದನ್ನು ಕೈಬಿಡುವ ರೀತಿಯಲ್ಲಿ ಮಾಡಬೇಡಿ ಎಂದು ಶಾಸಕರು ಹೇಳುತ್ತಾರೆ. ಬಹಳ ಜನಗಳಲ್ಲಿ ಅಭಿಪ್ರಾಯ ಇರತಕ್ಕಂತಾದ್ದು ಕೂಡ, ಇದರಲ್ಲಿ ಒಳ್ಳೆಯ ಕೆಲಸ ಆಗುತ್ತಾ ಇದೆ, ಇದನ್ನು ಕೈಬಿಡಬೇಡಿ ಎಂದು ಹೇಳುತ್ತಾರೆ. ಇಡೀ ಸದನ ಇಂಥ ವಿಚಾರಗಳಿಗೆ ಒಪ್ಪಿಗೆ ಕೊಟ್ಟರೆ, ಕೈಬಿಡಬೇಕೆನ್ನುವಂತಾದ್ದಾದರೆ, ಕೈಬಿಟ್ಟು, ಬೇರೆ ಯೋಜನೆ ಕೆಳಗೆ ನಿಮಗೆ ಹಣ ಕೊಡುವುದಕ್ಕೆ ನಾವು ತಯಾರಿದ್ದೇವೆ. ಇದರ ಬಗ್ಗೆ ಸೂಕ್ಷ್ಮವಾಗಿ ಯೋಚನೆ ಮಾಡುವುದು ಮುಖ್ಯವಾದುದರಿಂದ, ಇದರ ಜೊತೆಗೆ ಶಾಸಕರುಗಳನ್ನು ಚರ್ಚೆಗೆ ಕರೆಯುತ್ತಿದ್ದೇನೆ. ಆ ಸಂದರ್ಭದಲ್ಲಿ ತಮ್ಮೆಲ್ಲಾ ಒಟ್ಟಭಿಪ್ರಾಯ ಕಂಡುಬಂದರೆ ಪ್ರಯತ್ನ ಮಾಡಬಹುದು.

ಶ್ರೀ ಬಿ.ಆರ್.ಯಾವಗಲ್:- ಹಳ್ಳಿಗಳಲ್ಲಿ ಈ ಯೋಜನೆಯನ್ನು ತಾವು ಜಾರಿಗೊಳಿಸುತ್ತಿದ್ದೀರಿ. ಆ ಹಳ್ಳಿಗಳಲ್ಲಿ ಕೈಗೆತ್ತಿಕೊಂಡಂಥ ಕುಡಿಯುವ ನೀರಿನ ಯೋಜನೆಗಳನ್ನು ನಿಲ್ಲಿಸಿಲ್ಲ ಅಥವಾ ಪ್ರಾರಂಭ ಮಾಡಿಲ್ಲ. ಕಳೆದ 4-5 ವರ್ಷಗಳಿಂದ ಅಲ್ಲೇನೂ ಕೆಲಸ ನಡೆಯುತ್ತಾ ಇಲ್ಲ. ಆ ಯೋಜನೆಗಳನ್ನು ಜಾರಿಗೊಳಿಸುವುದನ್ನು 1ನೇ ಹಂತ, 2ನೇ ಹಂತ, 3ನೇ ಹಂತ ಎಂದು. 3ನೇ ಹಂತದಲ್ಲಿ ಆ ಕುಡಿಯುವ ನೀರಿನ ಯೋಜನೆಯನ್ನು ಜಾರಿಗೊಳಿಸಬೇಕಾದರೆ, ನೀವು, ಈ ಕಾರ್ಯಕ್ರಮದ ಒಳಪಟ್ಟು 3-4 ವರ್ಷಗಳು ಬೇಕು. ಅಲ್ಲಿಯವರೆಗೆ, ಅಲ್ಲಿ ಯಾವುದೇ ರೀತಿಯಿಂದಲೂ ಕುಡಿಯುವ ನೀರಿನ ಯೋಜನೆಯನ್ನು ಜಾರಿಗೊಳಿಸಲಿಕ್ಕೆ ಸಾಧ್ಯವಾಗುತ್ತಾ ಇಲ್ಲ. ತಾವು ಇದಕ್ಕೇನಾದರೂ ಪರಿಹಾರ ಸೂಚನೆ ಮಾಡಬೇಕು.

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ಅವರು ಭಾವಿಸಿದಂತೆ ಅಲ್ಲ. ಈಗಾಗಲೇ ತಮಗೆ ಗೊತ್ತಿದ್ದಂತೆ ಬೇರೆ ಬೇರೆ ಯೋಜನೆ ಕೆಳಗೆ ಇದು ಮಂಜೂರಾತಿಯಾಗಿದ್ದರೂ ಕೂಡ 1-2-3 ಹಂತ ಇರತಕ್ಕಂಥದ್ದು ಸಂಪನ್ಮೂಲಗಳ ಲಭ್ಯತೆಯ ಮೇಲೆ ಅವಲಂಬಿತವಾಗಿರತಕ್ಕಂಥ ಕಾರ್ಯಕ್ರಮ. ಆದರೆ, ಅವರು ಹೇಳಿದಂತೆ, ಯಾವುದೇ ಊರು ಇದರಲ್ಲಿ ಸೇರಿದೆಯೆಂದು, ಕುಡಿಯುವ ನೀರಿನಿಂದ ಅವರು ವಂಚಿತರಾಗಿಲ್ಲ. ಪ್ರಕೃತಿ ವಿಕೋಪ ನಿಧಿಯಿಂದ ಕೊಟ್ಟಿದ್ದೇವೆ. ಬರಗಾಲದ ನಿಧಿಯಿಂದ ಕೊಟ್ಟಿದ್ದೇವೆ. ಎನ್ಆರ್ಡಬ್ಲ್ಯುಎಸ್‌ನಿಂದ ಓವರ್ ಹೆಡ್ ಟ್ಯಾಂಕ್ ಕಟ್ಟಬೇಕೆಂಬ ಪ್ರಶ್ನೆ ಬರುವುದಿಲ್ಲ. ಅಲ್ಲಿ ಕೈ ಪಂಪುಗಳನ್ನು ಅಳವಡಿಸಿ ಕೊಟ್ಟಿದ್ದೇವೆ. ಕುಡಿಯುವ ನೀರಿನ ಸರಬರಾಜು

ಯೋಜನೆಯನ್ನು ಮಾಡಿಕೊಟ್ಟಿದ್ದೇವೆ. ಆದರೆ, ವ್ಯಾಪಕವಾಗಿ 40 ಎಲ್.ಟಿ.ಡಿ ಬರತಕ್ಕಂಥ ರೀತಿಯಲ್ಲೇ ಅವರಿಗೆ ಮಾಡಿಕೊಡತಕ್ಕಂತಾದ್ದಕ್ಕೆ ತೊಂದರೆ ಇದೆ.

ಅಧ್ಯಕ್ಷರು:- ಇಲ್ಲಿಗೆ ಸಾಕು ಮಾಡಿ, ತಾವು ಉಪಾಧ್ಯಕ್ಷರಾಗಿ ಕೆಲಸ ಮಾಡಿದ್ದೀರಿ. ಈಗಾಗಲೇ 20 ನಿಮಿಷ ತೆಗೆದುಕೊಳ್ಳಲಾಗಿದೆ. ಮಾನ್ಯಮಂತ್ರಿಗಳು ನಿಮ್ಮನ್ನೆಲ್ಲಾ ಕರೆಯುತ್ತಾರಂತೆ.

ಶ್ರೀ ಬಿ.ಆರ್.ಯಾವಗಲ್:- ನಾನು ಹೇಳಿದಂಥ ಪ್ರಶ್ನೆ ಅನೇಕ ಹಳ್ಳಿಗಳು ತುಂಬಾ ಹಿಂದುಳಿದ ಹಳ್ಳಿಗಳಾಗಿವೆ. ತಾವು ಹಾಕುವಂಥ ಯಾವುದೇ ಕುಡಿಯುವ ನೀರಿನ ಬಾವಿಗಳಿಂದ ಅಲ್ಲಿ ಪ್ರಯೋಜನವಿಲ್ಲ. ಸುಮಾರು ಹತ್ತಾರು ಕಿಲೋಮೀಟರಿನಿಂದ ನೀರನ್ನು ತರಬೇಕಾಗುತ್ತದೆ. ತಾವು, ಬೋರ್‌ವೆಲ್ ಹಾಕಿ ನೀರು ಕೊಟ್ಟಿದ್ದೇವೆಂದು ಹೇಳುತ್ತೀರಿ. ಅದರಿಂದ ಪ್ರಯೋಜನವಾಗುತ್ತಾ ಇಲ್ಲ. ನಾಲ್ಕಾರು ವರ್ಷಗಳಿಂದ ಈ ಯೋಜನೆ ಜಾರಿಗೊಳಿಸುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ದಯವಿಟ್ಟು ಇದಕ್ಕೆ ಪರಿಹಾರ ಕಂಡುಹಿಡಿಯಿರಿ.

ಶ್ರೀ ಎಂ.ಪಿ.ಪ್ರಕಾಶ್:- ಸನ್ಮಾನ್ಯ ಅಧ್ಯಕ್ಷರೇ, ಅವರಿಗೂ ಕೂಡ ವಿಚಾರ ಗೊತ್ತಿರತಕ್ಕಂಥಾದ್ದೆ. ಈ ಯೋಜನೆಯನ್ನು ಕೈಬಿಡಬೇಕೆಂದು ಏನಾದರೂ ಅವರು ಬರೆದುಕೊಟ್ಟರೆ, ಖಂಡಿತವಾಗಿಯೂ ಹೂಡ ರಾಜೀವ್‌ಗಾಂಧಿ ಟೆಕ್ನಾಲಜಿಕಲ್ ಮಿಷನ್ ಕೆಳಗೆ ಇಂತಹ ಗ್ರಾಮಗಳ ಸಮುಚ್ಛಯವನ್ನು ತೆಗೆದುಕೊಂಡು ಹಣವನ್ನು ಒದಗಿಸುವುದಕ್ಕೆ ಸಾಧ್ಯತೆ ಇದೆ. ಅದನ್ನು ದಯಮಾಡಿ, ವಿಶ್ವಬ್ಯಾಂಕ್ ಯೋಜನೆಯ ಕೆಳಗೆ ಈ ಗ್ರಾಮಗಳನ್ನು ಕೈಬಿಡಬೇಕೆಂದು ತಾವು ಬರೆಯಿರಿ. ನಾಳೆಯೇ ಇದಕ್ಕೆ ಮಂಜೂರಾತಿಯನ್ನು ಕೊಡುತ್ತೇವೆ. ಪರಿಹಾರ ಕಂಡುಹಿಡಿಯುತ್ತೇವೆ.

ಶ್ರೀ ಬಿ.ಶಿವರಾಮ್:- ವಿಶ್ವಬ್ಯಾಂಕ್ ಯೋಜನೆಯಲ್ಲಿ ತಾವೇನು ಕೆಲವು ಗ್ರಾಮಗಳನ್ನು ಆಯ್ಕೆ ಮಾಡಿದ್ದೀರಿ. ಅಲ್ಲಿ ತಾವು ಹೇಳಿದಹಾಗೆ 40 ಎಲ್.ಟಿ.ಸಿಡಿ ವಾಟರ್‌ಸಪ್ಲೈ ಯೋಜನೆಗಳನ್ನು ಜಿಲ್ಲಾ ಪಂಚಾಯ್ತಿಯಲ್ಲಿ ತೆಗೆದುಕೊಳ್ಳತಕ್ಕಂತಾದ್ದನ್ನು ಮಾಡುತ್ತಾರೆ. ಕನಿಷ್ಟ ನೀರಿನ ವ್ಯವಸ್ಥೆಯನ್ನು ಜಿಲ್ಲಾ ಪಂಚಾಯ್ತಿಯಲ್ಲಿ ತೆಗೆದುಕೊಳ್ಳತಕ್ಕಂತಾದ್ದನ್ನು ಮಾಡುತ್ತಾರೆ. ಕನಿಷ್ಟ ನೀರಿನ ವ್ಯವಸ್ಥೆಯನ್ನು ಜಿಲ್ಲಾ ಪಂಚಾಯ್ತಿಯವರು ಮಾಡುತ್ತಾ ಇದ್ದಾರೆ. ಅದರಿಂದ ಏನಾಗಿದೆ, ಈಗಾಗಲೇ 3-4 ವರ್ಷ ಆಗಿರುವುದರಿಂದ, ತಾವು ತಿಳಿಸಿದ ಹಾಗೆ ಕೆಲವು ಗ್ರಾಮಗಳಲ್ಲಿ ಇನ್ನೂ ಜಲ ಮೂಲವನ್ನು ಕಂಡುಹಿಡಿಯುವುದನ್ನು ಮಾಡಿಲ್ಲ. ನೀಲಿ ನಕ್ಷೆಗಳನ್ನು ಮಾಡಿಲ್ಲ. ಅಂದಾಜುಗಳನ್ನು ಮಾಡಿಲ್ಲ. ತಾವು ಹೇಳಿದ ಅಂಕಿಸಂಖ್ಯೆ ಪ್ರಕಾರ, ಇನ್ನೂ 812 ಗ್ರಾಮಗಳಿಗೆ ಎಸ್ಟಿಮೇಟ್ ಮತ್ತು ಪ್ಲಾನ್ ತಯಾರಾಗಬೇಕಾಗಿದೆ.

ನನ್ನ ಒಂದು ಬೇಡಿಕೆ ತಮ್ಮಲ್ಲಿ ಇಷ್ಟೇ. ಆದಷ್ಟು ಬೇಗ ಈ ಯೋಜನೆಯನ್ನು ಅನುಷ್ಠಾನಕ್ಕೆ ತರುವಂತಾದ್ದಕ್ಕೆ ತ್ವರಿತಗತಿಯಲ್ಲಿ ಅಧಿಕಾರಿಗಳ ಸಭೆಯನ್ನು ಕರೆದು ಮಾಡಿಸತಕ್ಕಂಥಾದ್ದನ್ನು ಮಾಡಬೇಕು. ಪಂತಿಗೆಯನ್ನು ಗಾಮಸ್ಥರು ಕೊಡತಕ್ಕಂಥಾದ್ದರ

ಬಗ್ಗೆ ತಾವು ಯಾವುದಾದರೂ ಬೇರೆ ಚಿಂತನೆಯನ್ನು ಮಾಡಿ, ಆದಷ್ಟು ಬೇಗ ಇದನ್ನು ಅನುಷ್ಠಾನಕ್ಕೆ ತಂದು ನೀರಿನ ವ್ಯವಸ್ಥೆಯನ್ನು ಮಾಡುವಂತಾದ್ದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರ ಕಳಕಳಿ ನನಗೆ ಮನವರಿಕೆ ಆಗಿದೆ. ಎಲ್ಲರಿಗೂ ಗೊತ್ತಿದ್ದಹಾಗೆ ಹಿಂದಿನ ಸರ್ಕಾರದವರು ಎಂದು ಹೇಳಿ ನಾನು ರಾಜಕೀಯ ಮಾಡುವುದಕ್ಕೆ ಪ್ರಯತ್ನ ಮಾಡುವುದಿಲ್ಲ, ಸುಮಾರು ಎರಡೂವರೆ ಮೂರು ವರ್ಷಗಳು ಕಾಲ ಎಂಪವರ್ ಸಮಿತಿಯಲ್ಲಿ ಇದ್ದರೂ ಸಹ ಇದರ ಟೆಂಡರ್ ಫೈನಲೈಸೇಷನ್ ಸಹ ಮಾಡಲಿಲ್ಲ, ನಾವು ಅಧಿಕಾರಕ್ಕೆ ಬಂದ 6 ತಿಂಗಳಲ್ಲಿ ಟೆಂಡರ್ ಫೈನಲೈಸ್ ಮಾಡಿದ್ದೇವೆ. ಅಲ್ಲಿ ಕೆಲಸ ಪ್ರಾರಂಭ ಮಾಡಿದ್ದೇವೆ. ಮತ್ತು ಅಧಿಕಾರಿಗಳನ್ನು ಕರೆದು ಈ ವಿಚಾರದಲ್ಲಿ ಚರ್ಚೆ ಮಾಡುತ್ತಿದ್ದೇವೆ. ಇದನ್ನು ಮರುಪರಿಶೀಲನೆ ಮಾಡಬೇಕು ಮತ್ತು ಷರತ್ತಿನಲ್ಲಿ ಸ್ವಲ್ಪ ಸಡಿಲ ಮಾಡಿಕೊಡಬೇಕು ಎನ್ನುವಂತಹ ವಿಷಯದಲ್ಲಿ ಈ ವಂತಿಗೆ ಸಂಬಂಧಪಟ್ಟ ಹಾಗೆ ವಿಶ್ವಬ್ಯಾಂಕಿನ ಯೋಜನೆ ಕೆಳಗೆ ನಾವು ಬರೆಯುತ್ತೇವೆ ಎಂದು ನಾನು ತಮ್ಮ ಮೂಲಕ ಭರವಸೆ ನೀಡುತ್ತೇನೆ.

ಶ್ರೀ ವೈ.ರಾಮಕೃಷ್ಣ:- ಮಾನ್ಯ ಅಧ್ಯಕ್ಷರೇ, ಆಡಳಿತಾತ್ಮಕ ದೃಷ್ಟಿಯಿಂದ ಬೆಂಗಳೂರು ನಗರವನ್ನು ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್ ಅಂತ ಪ್ರತ್ಯೇಕ ಮಾಡಿದಿರಿ. ಅದಕ್ಕೆ ಜನಸಂಖ್ಯೆ ಸಾಲದೇ ಬರುತ್ತದೆ ಮತ್ತು ವಿಸ್ತೀರ್ಣ ಸಾಲದೇ ಬರುತ್ತದೆ ಎಂದು ಹೇಳಿ ಅನೇಕಲ್ಲು ತಾಲ್ಲೂಕನ್ನು ಮತ್ತು ಉತ್ತರಹಳ್ಳಿ ತಾಲ್ಲೂಕನ್ನು ಸೇರಿಸಿರಿ. ಇದು ಬಹಳಷ್ಟು ಗ್ರಾಮಗಳಿಂದ ಕೂಡಿರತಕ್ಕಂಥಾ ತಾಲ್ಲೂಕು, ಅವು ಎಲ್ಲಾ ಅಭಿವೃದ್ಧಿ ಕಾರ್ಯಗಳಿಂದ ವಂಚಿಸಲ್ಪಟ್ಟಿವೆ. ಇದನ್ನು ತಾವು ಗಮನದಲ್ಲಿ ಇಟ್ಟುಕೊಂಡು ಯಾವ ಮಾನದಂಡ ಉಪಯೋಗಿಸಿದರೂ ಕೂಡ ಕಾವೇರಿ ನೀರಿನ ಸೌಲಭ್ಯ ಇಲ್ಲದೇ ಇರುವುದು ಯಾವುದೇ ನದಿ ಇಲ್ಲದೇ ಇರತಕ್ಕಂಥಾದ್ದು, ಮತ್ತು ಯಾವ ದೊಡ್ಡ ಕೆರೆಗಳೂ ಸಹ ಕುಡಿಯುವ ನೀರಿನ ಆಶ್ರಯ ಇಲ್ಲವೇ ಇರತಕ್ಕಂಥಾದ್ದು, ಮತ್ತು ಬಾರ್ಡರ್ ಏರಿಯಾ ಆಗಿರುವುದರಿಂದ ಅಂತರ್‌ಜಲವನ್ನೇ ನಂಬಿಕೊಂಡಿರತಕ್ಕಂಥ ಅನೇಕಲ್ಲು ತಾಲ್ಲೂಕನ್ನು ಈ ಪಟ್ಟಿಗೆ ಸೇರಿಸುತ್ತೀರೋ?

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ಇದು ಬಹಳ ಯೋಗ್ಯವಾದಂತಹ ಸಲಹೆ. ಮುಂದಿನ ಸಾರಿ ಸೇರಿಸುವಂತಹ ಪ್ರಸಂಗ ಬಂದಾಗ ಖಂಡಿತವಾಗಿ ಅದನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ.

ಶ್ರೀ ವೈ.ರಾಮಕೃಷ್ಣ:- ಈಗಲೇ ಮಾಡಿ ಸ್ವಾಮಿ. ಒಂದು ತಾಲ್ಲೂಕನ್ನು.

ಶ್ರೀ ಎಂ.ಪಿ.ಪ್ರಕಾಶ್:- ನಮ್ಮ ಕೈಯಲ್ಲಿ ಇಲ್ಲ. ವಿಶ್ವಬ್ಯಾಂಕ್ ಯೋಜನೆ ಕೆಳಗೆ 12 ಗ್ರಾಮಗಳು ಮತ್ತು 12 ಜಿಲ್ಲೆಗಳು ಎಂದು ಹೇಳಿ ಈಗಾಗಲೇ ಅಯ್ಕೆ ಮಾಡಿ ಒಪ್ಪಂದದಲ್ಲಿ ಸೇರಿಸಲ್ಪಟ್ಟಿವೆ. ಈಗ ಹೊಸದಾಗಿ ಸೇರಿಸುವಂತಹ ಪ್ರಶ್ನೆ ಉದ್ಭವವಾಗುವುದಿಲ್ಲ. ಈ ಯೋಜನೆಗೆ 447 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹೊಸದಾಗಿ ವಿಸ್ತರಿಸುತ್ತೇವೆ ಎನ್ನುವಂತಹ ಮಾತು ಬಂದಾಗ ಖಂಡಿತವಾಗಿಯೂ ಸಹ

ಗ್ರಾಮಾಂತರ ಜಿಲ್ಲೆಯಲ್ಲಿರುವ ಆನೇಕಲ್‌ನ್ನು ಸಹ ಸೇರಿಸುತ್ತೇವೆ. ಆದರೆ ತಾವು ಹೇಳಿದಂತೆ ಅಷ್ಟು ಶೋಚನೀಯವಾದ ಪರಿಸ್ಥಿತಿ ಇಲ್ಲ. ಅಲ್ಲಿ ಬಂದಷ್ಟು ಸ್ಟ್ಯಾಂಪ್ ಡ್ಯೂಟಿ ಯಾವ ತಾಲ್ಲೂಕಿಗೂ ಬರುತ್ತಿಲ್ಲ. ಬೆಂಗಳೂರು ನಗರದಲ್ಲಿ ಇತ್ತೀಚಿನ ದಿನಗಳಲ್ಲಿ ಒಂದೊಂದು ತಾಲ್ಲೂಕು ಅಭಿವೃದ್ಧಿ ಮಂಡಳಿಗಳಲ್ಲಿ 7-8 ಕೋಟಿ ರೂಪಾಯಿಗಳ ಹಣ ಬರುತ್ತಿದೆ. ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಇರುವಂತಹ ಯಾವುದೇ ತಾಲ್ಲೂಕಿನಲ್ಲಿ ಇಷ್ಟು ಪ್ರಮಾಣದ ಹಣ ಬರುತ್ತಿಲ್ಲ. ಆದರೂ ಸಹ ಇದನ್ನು ನಾವು ಸರಿಪಡಿಸುತ್ತೇವೆ.

ಶ್ರೀ ಎಂ.ಶ್ರೀನಿವಾಸ್:- ಮಾನ್ಯ ಅಧ್ಯಕ್ಷರೇ, ಸ್ಟ್ಯಾಂಪ್ ಡ್ಯೂಟಿ ಹೆಚ್ಚು ಬರುತ್ತದೆ ಎಂದು ತಾವು ಹೇಳುತ್ತೀರಿ ಅಷ್ಟೇ ಲಕ್ಷಾಂತರ ಜನ ಹೆಚ್ಚು ಇದ್ದಾರೆ. ನಿಮ್ಮ ಕ್ಷೇತ್ರದಲ್ಲಿ ಒಂದು ಲಕ್ಷ ಜನ ಇರಬಹುದು. ನಮ್ಮ ಕ್ಷೇತ್ರದಲ್ಲಿ 11-12 ಲಕ್ಷ ಜನ ಇದ್ದಾರೆ.

ವಿಷಯ:- ಧಾರವಾಡ ಜಿಲ್ಲೆಯಲ್ಲಿ ಕೆರೆಗಳ ಹೂಳೆತ್ತುವ ಕಾರ್ಯ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 59 (466)

ಶ್ರೀ ಅಶೋಕ ಎಸ್.ಕಾಟವೆ (ಹುಬ್ಬಳ್ಳಿನಗರ):- ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ, ವಿಜ್ಞಾನ ತಂತ್ರಜ್ಞಾನ ಮತ್ತು ಅಸಂಪ್ರದಾಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಧಾರವಾಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ಕೆರೆಗಳ ಹೂಳೆತ್ತುವ ಕಾರ್ಯವನ್ನು 1993-94, 1994-95, 1995-96ರ ಸಾಲಿನಲ್ಲಿ ಕೈಗೊಳ್ಳಲಾಗಿದೆ ಹಾಗೂ ಎಷ್ಟು ಹಣ ವೆಚ್ಚ ಮಾಡಲಾಗಿದೆ?

ಆ) ಪರಿಸರ ಜಾಗೃತಿಗಾಗಿ ಧಾರವಾಡ ಜಿಲ್ಲೆಯಲ್ಲಿ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು ಹಾಗೂ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ? (1995 ಮತ್ತು 1996ನೇ ಸಾಲಿನ ವಿವರ ಒದಗಿಸುವುದು).

ಶ್ರೀ ಬಸವರಾಜ ನೀ.ಶಿವಣ್ಣನವರ್ (ಪರಿಸರ ಮತ್ತು ಜೀವಿಶಾಸ್ತ್ರ, ವಿಜ್ಞಾನ ತಂತ್ರಜ್ಞಾನ ಮತ್ತು ಅಸಂಪ್ರದಾಯ ಇಂಧನ ರಾಜ್ಯ ಸಚಿವರು):-

ಅ) ಮಾಹಿತಿಯನ್ನು ಅನುಬಂಧದಲ್ಲಿ ಇಳವಡಿಸಿದೆ.

ಆ) ಸರ್ಕಾರವು ಪರಿಸರ ಜಾಗೃತಿಯನ್ನು ಉಂಟು ಮಾಡುವ ಸಲುವಾಗಿ ಜನರ ಮಧ್ಯೆ ಸಾಮೂಹಿಕ ಪ್ರಚಾರ ಮಾಧ್ಯಮಗಳ ಮೂಲಕ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ. ಅವುಗಳಲ್ಲಿ ಧಾರವಾಡ ಜಿಲ್ಲೆಯಲ್ಲಿ 1995-96ನೇ ಸಾಲಿನಲ್ಲಿ ವಿಶ್ವಪರಿಸರ ದಿನಾಚರಣೆಯನ್ನು ಪ್ರತಿ ವರ್ಷ ಜೂನ್ 5ರಂದು ಆಚರಿಸಲಾಗುತ್ತಿದೆ. ಇದರ ಅಂಗವಾಗಿ ಪರಿಸರದ ಬಗ್ಗೆ ಜನರಲ್ಲಿ ತಿಳುವಳಿಕೆಯನ್ನು ಮೂಡಿಸುವ ಸಲುವಾಗಿ ಸ್ಲೈಡ್ಸ್, ಸ್ಟಿಕ್ಕರ್ಸ್‌ಗಳು ಬ್ಯಾನರ್‌ಗಳನ್ನು ಮುದ್ರಿಸಿ ಸಾರ್ವಜನಿಕರಿಗೆ ವಿತರಿಸಲಾಗಿದೆ.

ಹುಬ್ಬಳ್ಳಿ - ಧಾರವಾಡ ನಾಗರೀಕ ಪರಿಸರ ಸಮಿತಿ ಧಾರವಾಡ ಇವರಿಗೆ ಪರಿಸರ